(4) ಮಂತ್ರಿಗಳ ಉತ್ತರ:

ಗುಲ್ಬರ್ಗಾ ಜಿಲ್ಲೆಯ ಜಿಲ್ಲಾ ಪಂಚಾಯತಿ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ ಸಂದರ್ಭದಲ್ಲಿ ನಡೆದಿರತಕ್ಕಂಥ ಪ್ರಕರಣದ ಬಗ್ಗೆ ಮಂತ್ರಿಗಳಿಂದ ಉತ್ತರ.

+ ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿರಾಜ್ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆ ಸಂದರ್ಭದಲ್ಲಿ ನಡೆದಿರತಕ್ಕಂಥ ಪ್ರಕರಣದ ಬಗ್ಗೆ ನಿನ್ನೆ ದಿವಸ ನಿಲುವಳಿ ಸೂಚನೆ ಮಂಡಿಸುವ ಮುಖಾಂತರ ಕೆಲವು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ, ಇದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಯವರು ನಿನ್ನೆ ದಿವಸ ನನ್ನ ಗೈರುಹಾಜರಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಆ ಉತ್ತರವನ್ನು ಮುಂದುವರಿಸಿ ನಾನು ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಈ ವಿಷಯವನ್ನು ಬಿಡಿಸಿ ನೋಡುವುದರ ಜೊತೆಗೆ ಸಮಗ್ರವಾಗಿ ಕೂಡ ಯೋಚನೆ ಮಾಡಬೇಕಾಗುತ್ತದೆ. ಇಲ್ಲಿ ನಡೆದಿರತಕ್ಕಂಥ ನಡವಳಿಕೆ ಪ್ರಕಾರ ಹೇಳುವುದಾದರೆ, ಸ್ಥಾಯಿ ಸಂಸ್ಥೆಗಳ ಅಧ್ಯಕ್ಷರನ್ನು ಆಯ್ಕೆ ಮಾಡುವಂಥ ವಿಚಾರವಲ್ಲ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಚುನಾವಣೆ ಪ್ರಕ್ರಿಯೆ ನಡೆಸಬೇಕೆಂದು ತೀರ್ಮಾನವಾಗಿದೆ. ಅಲ್ಲಿ ನಡೆದಿರತಕ್ಕಂಥ ನಡವಳಿಕೆಯ ಫೋಟೋ ಕಾಪಿಯನ್ನು ನಾನು ತಂದಿದ್ದೇನೆ. ನೀತಿ ಸಂಹಿತೆಗಳಿಗೆ ಮತ್ತು ನಿಯಮಾವಳಿಗಳಿಗೆ ಒಳಪಡದಂತೆ, ತನಗೆ ತಿಳಿದಂತೆ ಅಧ್ಯಕ್ಷ ಪದವಿಯನ್ನು ನಿರ್ವಹಿಸಿಕೊಂಡು ಹೋಗಲಾಗುತ್ತದೆಂದರೆ, ಅದು ಪ್ರಜಾಸತ್ತಾತ್ಮಕವಾದಂಥ ವ್ಯವಸ್ಥೆಗೆ ಭೂಷಣವಾಗತಕ್ಕದ್ದಲ್ಲ. ಅವರು ಎಷ್ಟು ತಪ್ಪು ಮಾಡಿದ್ದಾರೆಂದರೆ ''ಶ್ರೀ ಶಂಕರಣ್ಣ-ಒಡಕ್ಯಾಳ್, ಜಿಲ್ಲಾ ಪಂಚಾಯಿತಿ ಸದಸ್ಯರು, ಮೇಲಿನ ವಿಷಯದ ಬಗ್ಗೆ ಆಡಳಿತಾತ್ಮಕ ಸಮಸ್ಯೆ ಇದ್ದು ಅಧಿಕಾರಿಗಳ ಮಟ್ಟದಲ್ಲಿ ಬಗೆಹರಿಸಲು ಸಲಹೆ ನೀಡಿದರು. ಶ್ರೀ ಶಂಕರಣ-ಬಡಕ್ಯಾಳ್, ಜಿಲ್ಲಾ ಪಂಚಾಯಿತಿ ಸದಸ್ಯರು ಜಿಲ್ಲೆಯ ಅಭಿವೃದ್ಧಿ ಸಲುವಾಗಿ ಸ್ಥಾಯಿ ಸಮಿತಿಗಳ ರಚನೆ ತುಂಬಾ ಅಗತ್ಯವಾಗಿದೆ, ಈ ವರ್ಷ ಸ್ವತಂತ್ರ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು, ಕಾರಣ ಸ್ಥಾಯಿ ಸಂಸ್ಥೆಗಳ ರಚನೆ ಸಲುವಾಗಿ ಇದೇ ತಿಂಗಳ 15ರಿಂದ 25ರವರೆಗೆ ಒಂದು ದಿವಸ ನಿಗದಿ ಪಡಿಸಬೇಕೆಂದು ಸಲಹೆ ಮಾಡಿದರು. ಸಭೆಯು ಈ ಬಗ್ಗೆ ವಿವರವಾಗಿ ಚರ್ಚಿಸಿ, ಜಿಲ್ಲಾ ಪಂಚಾಯಿತಿ ಸ್ಥಾಯಿ ಸಂಸ್ಥೆಗಳ ರಚನೆ ಸಂಬಂಧವಾಗಿ ದಿನಾಂಕ: 23-8-97 ರಂದು ಮುಂಜಾನೆ 11 ಗಂಟೆಗೆ ಸಭೆ ಕರೆಯಲು ಅಂದಿನ ಸಭೆಯಲ್ಲಿ ಎಲ್ಲಾ ಸ್ಥಾಯಿ ಸಮಿತಿಗಳ ಸದಸ್ಯರುಗಳ ಚುನಾವಣೆ ನಡೆಸಲು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತು ''ಎಂದು ಹೇಳಿ ತೀರ್ಮಾನವನ್ನು ಬರೆದರು. ಅದರ ಒಪ್ಪಿಗೆಗಾಗಿ ಅಧ್ಯಕ್ಷರಿಗೆ ಕಳುಹಿಸಿಕೊಟ್ಟ ಮೇಲೆ, ಅವರು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರ ನೀಡಲಾಯಿತು''. ಎನ್ನುವಂಥಾದ್ದನ್ನು ಹೊಡೆದುಹಾಕಿಬಿಟ್ಟರು. ಒಂದು ಅಧಿಕೃತ ದಾಖಲೆಯನ್ನು ಈ ಮನುಷ್ಯ ತನಗೆ ಯಾವ

ರೀತಿ ಅನುಕೂಲವಾಗುತ್ತದೆಯೋ ಆ ರೀತಿ ತಿದ್ದಿದರು. ಅದನ್ನು ಅಧ್ಯಕ್ಷರೇ ಮಾಡಿದರೋ ಅಥವಾ ಅದನ್ನು ಬೇರೆಯವರಿಗೆ ಹೇಳಿ ಕೊಟ್ಟು ಮಾಡಿಸಿದರೋ ಎಂಬುದು ಗೊತ್ತಿಲ್ಲ. ಅದರ ಫೋಟೋ ಕಾಪಿಯನ್ನು ತರಿಸಿಕೊಂಡಿದ್ದೇನೆ. ಅದನ್ನು ವಿರೋಧ ಪಕ್ಷದ ನಾಯಕರು ಪರಾಂಭರಿಸಬೇಕು. ಅವರೂ ಗುಲ್ಬರ್ಗಾ ಜಿಲ್ಲೆಯವರೇ ಆಗಿರುವುದರಿಂದ ಇದು ಅವರಿಗೆ ಗೊತ್ತಿರುತ್ತದೆ. ಅಧ್ಯಕ್ಷರಾಗಿರುವವರೇ ಈ ರೀತಿ ಕಾರ್ಯ ನಿರ್ವಹಣೆ ಮಾಡುವುದಾದರೆ ಹೇಗೆ? ನಿಯಮಾವಳಿಗಳು ರಚನೆಯಾಗಿರುವುದರಿಂದ ಅದನ್ನು ಪ್ರಾಮಾಣಿಕವಾಗಿ ಎತ್ತಿ ಹಿಡಿಯತಕ್ಕಂಥ ಪ್ರಯತ್ನವನ್ನು ಎಲ್ಲರೂ ಮಾಡಬೇಕಾಗುತ್ತದೆ. ಆದರೆ ನಿಯಮಾವಳಿಗಳನ್ನು ಬರೀ ತಾಂತ್ರಿಕ ದೃಷ್ಟಿಯಿಂದ ಪರಿಶೀಲಿಸಿ, ನಮಗೆ ಅನುಕೂಲವಾಗುವಂಥ ರೀತಿಯಲ್ಲಿ ಬಗ್ಗಿಸಿ ಅಥವಾ ನಮಗೆ ಅನಾನುಕೂಲ ಸಂದರ್ಭ ಬಂದಾಗ ಅದನ್ನು ಸಂಪೂರ್ಣವಾಗಿ ಕಡೆಗಣಿಸಿ ನಿರ್ಣಯ ಮಾಡುವುದಾದರೆ, ಯಾವುದೇ ಒಂದು ವ್ಯವಸ್ಥೆ ಸರಿಯಾಗಿ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಮಾನ್ಯ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಚುನಾವಣೆ ನಡೆಸಬೇಕೆಂದು ತೀರ್ಮಾನ ಮಾಡಿದ ಪ್ರಕಾರ, ಅವರು ಈ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟ ಮಾಡಿದ ನಂತರ, ಅವರ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಂಥ ಸಂದರ್ಭದಲ್ಲಿ ಅದನ್ನು ರದ್ದು ಮಾಡಿದ್ದಾರೆ. ಅಂದರೆ ಅದನ್ನು ಹೊಡೆದುಹಾಕಿದ್ದಾರೆ. ಮೂಲಭೂತವಾಗಿ ದಾಖಲೀಕೃತವಾಗಿರತಕ್ಕಂಥ ಕಾಗದಪತ್ರಗಳನ್ನು ಮತ್ತು ತೀರ್ಮಾನಗಳನ್ನು ಏಕಪಕ್ಷೀಯವಾಗಿ ಬೇಕಾಯಿದೇಶಿರ್ ಮಾಡಿರತಕ್ಕಂಥದ್ದೂ ಕೂಡ ಅಕ್ಷಮ್ಯ ಅಪರಾಧ. ಎರಡನೆಯದಾಗಿ ಇಲ್ಲಿ ಒಂದು ಸಭೆಯನ್ನು ನಡೆಸತಕ್ಕಂಥ ಸಂದರ್ಭದಲ್ಲಿ, ಸಭೆಗಳನ್ನು ನಡೆಸುವುದಕ್ಕೆ ಒಂದು ನೀತಿ ಸಂಹಿತೆಗಳು ಇರುತ್ತವೆ. ಅವರು ಇದಕ್ಕೆ ಸಂಬಂಧಪಟ್ಟಂಥ ವಿಡಿಯೋ ರೆಕಾರ್ಡ್ ಮಾಡಿರತಕ್ಕಂಥ ವಿಡಿಯೋ ಕ್ಯಾಸೆಟ್ ನಮ್ಮ ಹತ್ತಿರ ಇದೆ ಮತ್ತು ಅದಕ್ಕೆ ಸಂಬಂಧಪಟ್ಟಂಥ ಫೋಟೋಗಳು ಇವೆ. ಈ ತರಹದ ಚುನಾವಣೆಗಳು ಆಗುವಂತಹ ಸಂದರ್ಭದಲ್ಲಿ ಆತಂಕಕಾರಿ ಬೆಳವಣಿಗೆಗಳು ಆಗಬಹುದೆಂದು ಅಲ್ಲಿ ಸಂಪೂರ್ಣ ಪೊಲೀಸ್ ಬಂದೋಬಸ್ತ್ ವ್ಯವಸ್ಥೆಯನ್ನೂ ಕೂಡ ಮಾಡಲಾಗಿದೆ. ಇದನ್ನು ಅಧ್ಯಕ್ಷರೆ ಹೇಳಿದ್ದರು. ಇದು ಆದನಂತರ ಸುಮಾರು 60ಕ್ಕಿಂತ ಹೆಚ್ಚು ಸದಸ್ಯರು ಅದರಲ್ಲಿ ಭಾಗವಹಿಸಿದ್ದಾರೆ, ಹಾಗೆ ಭಾಗವಹಿಸಿರತಕ್ಕಂಥ ಪ್ರತಿಯೊಬ್ಬ ಸದಸ್ಯರೂ ಆ ಒಂದು ವಿಚಾರದಲ್ಲಿ ಸಹಿ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಒಂದು ಆತಂಕಕಾರಿಯಾಗಿ ಅಲ್ಲಿ ಒಮ್ಮಿಂದ ಒಮ್ಮೆಲೆ ಏಕೀಭವಿಸಿ, ಅಲ್ಲಿ ಏನಾದರೂ ಗಲಭೆ ಆಗುತ್ತದೆ ಗಡಿಬಿಡಿ ಆಗುತ್ತದೆ ಎನ್ನತಕ್ಕಂಥ ಯಾವುದೇ ರೀತಿಯ ವಾತಾವರಣ ಇಲ್ಲದೇ ಇದ್ದಾಗ, ಅವರಲ್ಲಿ ಬಹುಮತ ಇಲ್ಲವೆಂಬ ಒಂದೇ ಒಂದು ಕಾರಣಕ್ಕಾಗಿ, ಇಲ್ಲಿ ಏನಾಗಿದೆ ಎಂದರೆ ಬಹುಮತವನ್ನು ಯಾವ ರೀತಿಯಿಂದಲಾದರೂ ಪಡೆದುಕೊಳ್ಳಬೇಕು, ಇಲ್ಲಿ ಆ ಪಕ್ಷ ಈ ಪಕ್ಷದ ಪ್ರಶ್ನೆ ಬರುವುದಿಲ್ಲ, ಇಲ್ಲಿ ಬಂದಿರತಕ್ಕಂಥದ್ದು ತಾವು ಯಾರದ್ದನ್ನಾದರೂ ಒತ್ತಡಗಳನ್ನು ತರತಕ್ಕಂಥದ್ದು, ಯಾರೋ ಅಧ್ಯಕ್ಷ ಆಗಬೇಕೆಂಬುದು, ಅದಕ್ಕೆ ಯಾವುದೇ ತರಹದ

ನೀತಿಯಾಗಲಿ, ಪದ್ಧತಿಗಳಾಗಲಿ ಸಂಬಂಧ ಇರುವುದಿಲ್ಲ. ಅಧಿಕಾರವನ್ನು ಕೈಹಿಡಿಯಬೇಕೆನ್ನುವ ಒಂದೇ ಒಂದು ಕಾರಣಕ್ಕಾಗಿ ಹಿಂದೆ ನಡೆದಿರತಕ್ಕಂಥ ಚುನಾವಣೆಗಳ ರಾದ್ಧಾಂತ ಆ ಪಕ್ಷ ಮತ್ತು ನಮ್ಮ ಪಕ್ಷ, ಎಲ್ಲಾ ಪಕ್ಷಗಳಲ್ಲಿ ಆಗಿರತಕ್ಕಂಥದ್ದು ಗುಲ್ಬರ್ಗ ಜಿಲ್ಲಾ ಪಂಚಾಯತಿಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಆಗಿರತಕ್ಕಂಥ ವ್ಯವಹಾರದಲ್ಲಿ ನಾವು ಕಂಡುಕೊಂಡಿದ್ದೇವೆ. ಅದು ಆದನಂತರ ಸ್ಥಾಯಿ ಸಮಿತಿಗೆ ಅಧ್ಯಕ್ಷರನ್ನು ಮಾಡಬೇಕು ಮತ್ತು ಸದಸ್ಯರನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಬಂದಾಗ ಅಲ್ಲಿ ಬಹುಮತ ಸಿಗುವುದಿಲ್ಲವೆಂಬ ಒಂದೇ ಒಂದು ಕಾರಣಕ್ಕೆ ಎಲ್ಲಾ ನಿಯಮಾವಳಿಗಳನ್ನು ಮತ್ತು ಅನುಚಿತವಾದಂಥ ರೀತಿಯಲ್ಲಿ, ಇಲ್ಲಿ ಅಪಾಯಸ್ಥಿತಿ ಇದೆ, ಗಲಭೆ ಆಗುವಂಥ ಪರಿಸ್ಥಿತಿ ಇದೆ. ಆದ್ದರಿಂದ ಈ ಕೂಡಲೇ ಸಭೆಯನ್ನು ನಾನು ಬರಖಾಸ್ತು ಮಾಡಿ ಮುಂದಕ್ಕೆ ಹಾಕಿದ್ದೇನೆಂದು ಹೊರಟು ಹೋಗುತ್ತಾರೆ. ಅಲ್ಲಿ ಯಾವ ತರಹದ ಅಂತರಿಕಗಳೂ ಕೂಡ ಇಲ್ಲ, ವಿರೋಧಪಕ್ಷದ ನಾಯಕರು ಮತ್ತು ತಮಗೂ ಕೂಡ ವಿಡಿಯೋ ಕ್ಯಾಸೆಟ್‌ಗಳನ್ನು ಕಳುಹಿಸಿಕೊಡುತ್ತೇವೆ. ಅದನ್ನು ತಾವು ನೋಡಬೇಕು, ಅಂದರೆ ಇಲ್ಲಿ ಯಾವುದೇ ಒಂದು ಕ್ರಿಯೆ ಆದರೆ ಅದಕ್ಕೊಂದು ಪ್ರತಿಕ್ರಿಯೆ ಹುಟ್ಟೇಹುಟ್ಟುತ್ತದೆ, ಇಲ್ಲಿ ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎನ್ನುವುದಕ್ಕಿಂಥ ಹೆಚ್ಚಾಗಿ ಈ ತರಹದ ನಡವಳಿಕೆಗಳು ಭೂಷಣವೇ, ಈ ತರಹದ ನಡವಳಿಕೆಗಳಿಂದ ಜಿಲ್ಲಾಪಂಚಾಯತಿ ಸರಿಯಾದಂಥ ರೀತಿಯಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆಯೇ? ಕಳೆದ ನಾಲ್ಕಾರು ವರ್ಷಗಳಿಂದ ಕೂಡ ಗುಲ್ಬರ್ಗ ಜಿಲ್ಲಾ ಪಂಚಾಯತಿಯಲ್ಲಿ 20ನೇ ಸ್ಥಾನದಲ್ಲಿಯೇ ಇದೆ. ಅದು ಮೇಲಕ್ಕೆ ಏರುವಂಥ ಕಾರ್ಯವನ್ನು ಯಾವ ಕಾಲಕ್ಕೂ ಮಾಡಿಲ್ಲ. ಅಲ್ಲಿ ಎಲ್ಲರಿಗೂ ಸಹಿಷ್ಣತೆ ಇರುವುದಿಲ್ಲ, ಅಲ್ಲಿ ಎಲ್ಲಿಯವರೆಗೆ ನಡೆಯುತ್ತದೆ ಎಂದರೆ, ಯಾರೋ ಒಬ್ಬ ವ್ಯಕ್ತಿ ಅಂದರೆ ಒಬ್ಬ ಚುನಾಯಿತ ಸದಸ್ಯನ ಅಣ್ಣ ಯಾರೋ ಒಬ್ಬ ಜ್ಯೂನಿಯರ್ ಇಂಜಿನಿಯರ್‌ಗೆ ಹೊಡೆದಿದ್ದಾನೆ ಎನ್ನುವುದಕ್ಕೆ ಎರಡು ದಿವಸದ ಸಭೆ, ಚರ್ಚೆಗಳು ಆಗುತ್ತವೆ. ಅವರು ಯಾರಿಗೋ ಹೊಡೆದರು, ಇವರು ಯಾರಿಗೋ ಅಪಮಾನ ಮಾಡಿದರು, ಇಲ್ಲಿ ನಿಯಮಾವಳಿಯ ಪ್ರಕಾರ ಹೋಗಬೇಕು ಎನ್ನುವುದೂ ಕೂಡ ಒಂದು ಹಿಡಿತ ಇಲ್ಲದೆ ಇರತಕ್ಕಂಥ ಪರಿಸ್ಥಿತಿ ಸೃಷ್ಟಿಯಾಗಿದೆ. ಈ ಚುನಾವಣೆಯನ್ನು ಮುಂದಕ್ಕೆ ಹಾಕಿ ಅವರು ಸಭೆಯನ್ನು ಬರಖಾಸ್ತು ಮಾಡಿ ಮುಂದಕ್ಕೆ ಹಾಕಿದ ನಂತರ, ನಾವು ಅಲ್ಲಿ ಇರತಕ್ಕಂಥ ಸದಸ್ಯರು ಭಾಗವಹಿಸಿರತಕ್ಕಂಥ ಬಗ್ಗೆ ಇದು ಅಸಿಂಧುತ್ವ ಎಂದು ಮಾತನಾಡುತ್ತಾರೆ. ಆದರೆ ಇಲ್ಲಿ 186ಎ ಕೆಳಗೆ ಒಂದು ಮಾತು ಇದೆ,

> "Any ordinary meeting may, with the consent of a majority of the members present, be adjourned from time to time, but no business shall be

transacted at any adjourned meeting other than that left undisposed at the meeting from which the adjournment took place."

ಎಂದು ಇದೆ. ಅಂದರೆ ಇಲ್ಲಿ ಏನು ವಾದ ಮಾಡಬಹುದು, ಇದು ಸಾಮಾನ್ಯ ಸಭೆಗೆ ಆಗಿರತಕ್ಕಂಥ ನಿಯಮಾವಳಿ, ಚುನಾವಣೆಗೋಸ್ಕರ ಮಾಡಿರತಕ್ಕಂಥ ಈ ಒಂದು ವಿಶೇಷ ಸಭೆಯನ್ನು ಕರೆದಿದ್ದರಿಂದ, ಈ ನಿಯಮಾವಳಿಗಳು ಅದಕ್ಕೆ ಅನ್ವಯವಾಗುವುದಿಲ್ಲ ಎನ್ನುವಂಥ ವಾದವನ್ನು ಇಲ್ಲಿ ಇಟ್ಟಿದ್ದಾರೆ. ಇದು ಒಂದು ಸಾಮಾನ್ಯ ಸಭೆಗೆ ಆಗಿರತಕ್ಕಂಥ ನಿರ್ಣಯ. ಆದರೆ ವಿಶೇಷ ಸಭೆಯಲ್ಲಿ ಯಾವರೀತಿಯಲ್ಲಿ ನಿಯಮಗಳನ್ನು ಅನುಸರಿಸಬೇಕು ಎನ್ನುವಂಥ ವಿಚಾರದಲ್ಲಿ ಈ ಕಾನೂನು ಅದು ಮೌನವಾಗಿರುವುದರಿಂದ, ಈ ಸಾಮಾನ್ಯ ಸಭೆಗೆ ಆಗುವಂಥ ನಿರ್ಣಯಗಳು ಮತ್ತು ನಡವಳಿಕೆಗಳು ಏನು ನಿಯಮಾವಳಿಗಳು ಇವೆ, ಅವು ಕೂಡ ಈ ವಿಶೇಷ ಸಭೆಗಳಿಗೆ ಅನ್ವಯವಾಗುತ್ತದೆ. ಯಾವುದೇ ಕಾನೂನು ರಚನೆ ಮಾಡತಕ್ಕಂಥವರು, ಮುಂದೆ ಬರತಕ್ಕಂಥವರು ಈ ಕಾನೂನು ಜಾರಿಗೆಗೊಳಸತಕ್ಕಂಥ ಜನ, ಅದರ ಆಶಯ ಮತ್ತು ಅಪೇಕ್ಷೆ, ಉದ್ದೇಶ ಇವುಗಳಿಗೆ ಅನುಗುಣವಾದಂಥ ರೀತಿಯಲ್ಲಿ ಅವರು ಒಂದು ವಿತಂಡವಾದಕ್ಕೆ ಒಳಗಾಗದೆ ಕಾನೂನು ಬದ್ಧವಾಗಿ ನಡವಳಿಕೆಗಳನ್ನು ನಡೆಸಿಕೊಳ್ಳುತ್ತಾರೆ ಎನ್ನತಕ್ಕಂಥದ್ದನ್ನು ಭಾವಿಸಿಕೊಂಡಿದ್ದೇನೆ. ಯಾರಾದರೂ ತಪ್ಪುಗಳನ್ನು ಮಾಡಿದರೆ ಊಹಿಸುವುದು ಬಹಳ ಕಷ್ಟ. ಈ ರೀತಿ ಉದ್ದೇಶಪೂರ್ವಕವಾಗಿ ನಡೆಯತಕ್ಕಂಥ ತಪ್ಪುಗಳನ್ನು ಊಹಿಸಿ ಅಂಥ ತಪ್ಪುಗಳಿಗೆ ಸರಿಯಾದಂತಹ ಮಾಹಿತಿ ಮತ್ತು ಉತ್ತರಗಳನ್ನು ಎಲ್ಲಾ ಕಾನೂನುಗಳಿಗೆ ಅಳವಡಿಸಿಕೊಳ್ಳಬೇಕೆಂದರೆ, ಇದು ಒಂದು ಮನುಷ್ಯನ ಇಂಜಿನ್ಯೂಇಟಿ ಪ್ರಶ್ನೆಗೆ ಸವಾಲು ಆಗುವಂತಹ ಪರಿಸ್ಥಿತಿ ಆಗುತ್ತದೆ. ಇಂಗ್ಲೆಂಡ್‌ನಲ್ಲಿ ಅನೇಕ ವಿಚಾರಗಳಿಗೆ ಇವತ್ತೂ ಕೂಡ ಸಂವಿಧಾನ ಇಲ್ಲ, ಅಲ್ಲಿಯ ಪ್ರಬುದ್ಧತೆಯಿಂದ ಅತ್ಯಂತ ಘನತೆಯಿಂದ ತಮ್ಮ ಬಹುಮತ ಅಥವಾ ಅಲ್ಪ ಮತಗಳಿಗೆ ಒತ್ತು ಕೊಡತಕ್ಕಂಥ ಮನೋವೈಶಾಲ್ಯ ಮತ್ತು ಅದರಂತೆ ನಡೆದುಕೊಳ್ಳತಕ್ಕಂಥ ಭಾವನೆಗಳು ಇರುವುದರಿಂದ ನಡವಳಿಕೆಗಳು ಯಾವಾಗಲೂ ಕೂಡ ಸಕ್ರಮವಾಗಿ ನಡೆಯುತ್ತವೆ. ಅವು ಕಾನೂನು ಬದ್ಧವಾಗಿ ನಡೆಯುತ್ತವೆ, ಅಪೇಕ್ಷಣೀಯವಾಗಿ ಕೂಡ ನಡೆಯುತ್ತವೆ, ಆದರೆ ಇಲ್ಲಿ ನಡೆದಿರತಕ್ಕಂಥ ವ್ಯವಹಾರ ಅಪೇಕ್ಷಣೀಯವಾದುದ್ದಲ್ಲ, ಈ ದೃಷ್ಟಿಯಿಂದ ಸಾಮಾನ್ಯ ಸಭೆಗೆ ಅನ್ವಯವಾಗುವಂಥ ನಿಯಮಾವಳಿಗಳು ಏನಿವೆ ಅವೂಕೂಡ ವಿಶೇಷ ಸಭೆಗೂ ಕೂಡ ಅನ್ವಯವಾಗುತ್ತದೆ. ಆದ್ದರಿಂದ ಇಲ್ಲಿ ಮಂತ್ರಿಗಳು ಇದ್ದರು, ಬೇರೆ ಸದಸ್ಯರು ಇದ್ದರು ಎನ್ನತಕ್ಕಂಥ ಪ್ರಶ್ನೆ ಇಲ್ಲ, ಅವರೆಲ್ಲರೂ ಕೂಡ ಜಿಲ್ಲಾಪಂಚಾಯತಿ ಸದಸ್ಯರಾಗಿರುವುದರಿಂದ ಅಲ್ಲಿ ಭಾಗವಹಿಸತಕ್ಕಂಥ ಅರ್ಹತೆ ಇದೆ ಮತ್ತು ಅವರು ಅಲ್ಲಿ ಭಾಗವಹಿಸಬೇಕಾಗಿರತಕ್ಕಂಥ ಸಂದರ್ಭ ಕೂಡ ಇದೆ. ಏಕೆಂದರೆ ಅವರು ಮಾರ್ಗದರ್ಶನ ಕೊಡಬೇಕಾದದ್ದು ಇದೆ. ಇದು ಅಲ್ಲದೆ ಇರತಕ್ಕಂಥ ಸಂದರ್ಭದಲ್ಲಿ,

ಅಂದರೆ ಈ ಕಾನೂನಿನಲ್ಲಿ ಏನು ಮಾಡಿದ್ದಾರೆಂದರೆ ಚುನಾವಣೆಗೆ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ಆಯ್ಕೆಮಾಡುವಾಗ ಅವರು ಚನಾವಣೆಯಲ್ಲಿ ನಿಲ್ಲುವುದಕ್ಕೆ ಬರುವುದಿಲ್ಲ ಮತ್ತು ಅವರಿಗೆ ಓಟ್ ಹಾಕುವಂತಹ ಅಧಿಕಾರ ಕೂಡ ಇರುವುದಿಲ್ಲ. ಆದರೆ ಇಂಥ ಸ್ಥಾಯಿ ಸಮಿತಿಗಳ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ಆಯ್ಕೆ ಮಾಡತಕ್ಕಂಥ ಸಂದರ್ಭಬಂದಾಗ, ಇಡೀ ಜಿಲ್ಲಾಪಂಚಾಯತಿ ಸದಸ್ಯರೆಲ್ಲರೂ ಕೂಡ ಭಾಗವಹಿಸಬೇಕು, ಆದರೆ ಚುನಾಯಿತ ಸದಸ್ಯರಲ್ಲಿ 5 ಮಂದಿಯನ್ನು ಈ ಸ್ಥಾಯಿ ಸಮಿತಿಗೆ ಆಯ್ಕೆ ಮಾಡಬೇಕೆಂದು ಇದೆ. ಇಲ್ಲಿ ಅವರೇ ರಚನೆ ಮಾಡಿರತಕ್ಕಂಥ ಕಾನೂನು, ಇಲ್ಲಿ ಅವರೆಲ್ಲಾ ಸದಸ್ಯರು ಇದರಲ್ಲಿ ಭಾಗವಹಿಸಬಹುದು, ಆದರೆ ಅವರು ಮಾತ್ರ ಸ್ಥಾಯಿ ಸಮಿತಿಯ ಸದಸ್ಯರಾಗುವುದಕ್ಕೆ ಬರುವುದಿಲ್ಲ; from among 5 members ಎಂದು ಏನು ಇದೆ, ಅವರನ್ನು ಆಯ್ಕೆಮಾಡಿಕೊಡಬೇಕೆಂದು, ಅನೇಕ ಜನ ಇದರ ಬಗ್ಗೆ ಇವತ್ತೂ ಕೂಡ ನನ್ನ ಹತ್ತಿರ ಸ್ಪಷ್ಟೀಕರಣ ಕೇಳುತ್ತಿದ್ದರು, ನನಗೂ ಸಹ ಗೊತ್ತಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಎಲ್ಲರೂ ಹಾಜರಿರಬೇಕೆಂದು ಏನಾದರೂ ನಿಯಮ ಇದೆಯೇ?

ಶ್ರೀ ಎಂ.ಪಿ.ಪ್ರಕಾಶ್: ಈಗ ಸದನಕ್ಕೆ ಹಾಜರಿರಬೇಕೆಂದರೆ, ಹಾಜರಿರಬೇಕೆಂದು ಯಾವುದೇ ನಿಯಮ ಇಲ್ಲ, ಆದರೆ 3 ತಿಂಗಳಿಗಿಂತ ಹೆಚ್ಚು ದಿವಸ ಹಾಜರಾಗದಿದ್ದರೆ ಅಧ್ಯಕ್ಷರು ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತಾರೆ. ಹಾಜರು ಇಲ್ಲದೆ ಇರತಕ್ಕಂಥವರು ಕರ್ತವ್ಯ ಪ್ರಜ್ಞೆ ಇಲ್ಲದಂಥ ಜನ; ಕರ್ತವ್ಯ ಪ್ರಜ್ಞೆ ಇರತಕ್ಕಂಥವರು ಹಾಜರು ಆಗೆಯೇ ಆಗುತ್ತಾರೆ. ಅದರ ಬಗ್ಗೆ ಯಾರು ಆಕ್ಷೇಪಣೆ ಮಾಡುವಂತಿಲ್ಲ. 186 ಸೆಕ್ಷನ್‌ನಲ್ಲಿ ಏನು ಹೇಳುತ್ತಾರೆಂದರೆ,

"Section-186- Standing Committees-(1) The Zilla Panchayat shall have the following standing committees, namely,

(a) General Standing Committee,

(b) Finance, Audit & Planning Committee,

(c) Social Justice Committee,

(d) Education & Industries Committee.

Further sub-clause (2) of the said section reads thus:

"Each standing committee shall consist of such number of

persons not exceeding 5 including the Chairman as specified by the Zilla panchayat elected by the Members of the Zilla Panchayat from amongst the elected members." ಅಂದರೆ, ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರಲ್ಲಿ 5 ಜನಗಳನ್ನು ಈ ಸ್ಥಾಯಿ ಸಮಿತಿಗಳಿಗೆ ಸದಸ್ಯರನ್ನಾಗಿ ಮಾಡಬೇಕೆಂಬ ಮಾತನ್ನು ಹೇಳುತ್ತಾರೆ. ಆದ್ದರಿಂದ ಅಲ್ಲಿ ಮಂತ್ರಿಗಳು ಇದ್ದಂಥವರೂ ಸಹ ಜಿಲ್ಲಾ ಪಂಚಾಯತಿ ಸದಸ್ಯರೇ ಆಗಿರುತ್ತಾರೆ. They are also voters, ಅವರು ಪ್ರಭಾವ ಬೀರುವುದಕ್ಕೆ ಹಾಜರಾಗಿದ್ದರು ಎಂದರೆ, ಹೇಗೆ, ಕೆಲವು ಸಲ ಬಹಳ ವರ್ಷಗಳಿಂದ ರಾಜಕೀಯದಲ್ಲಿ ಅಧಿಕಾರದಲ್ಲಿ ಇರತಕ್ಕಂಥವರು ಮತ್ತು ಶಾಸಕರು ಆಗಿದ್ದರೂ ಕೂಡ ಅವರು ಹಾಜರಾದರೆ, ತಮ್ಮ ಘನತೆಯಿಂದ ತಮ್ಮ ರಾಜಕೀಯ ಅನುಭವದಿಂದ ಪ್ರಭಾವ ಬೀರುವುದಕ್ಕೆ ಸಾಧ್ಯತೆ ಆಗುತ್ತದೆ. ಅವರ ರಾಜಕೀಯ ಹಿನ್ನೆಲೆಯಲ್ಲಿ ಒಮ್ಮೊಮ್ಮೆ ನಾವು ಮಂತ್ರಿಗಳೇ ಕಿರಿಯರಾಗುತ್ತೇವೆ. ಗುಲ್ಬರ್ಗದಲ್ಲಿ ಅದು ಆಗುವ ಸಾಧ್ಯತೆ ಇದೆ. ನಮ್ಮ ದರ್ಶನಾಪುರ್‌ರವರು ಸಭೆಗೆ ಹಾಜರಾಗಿದ್ದಾರೆ ಎನ್ನುವ ಕಾರಣಕ್ಕಾಗಿ, ಬೇರೆ ಸದಸ್ಯರ ಮೇಲೆ ಪ್ರಭಾವ ಬೀರುತ್ತಾರೆ ಎನ್ನುವ ಪ್ರಶ್ನೆ ಬರುವುದಿಲ್ಲ. ಅವರು ಅಧಿಕಾರದಲ್ಲಿ ಇಲ್ಲದೇ ಇರಬಹುದು, ಆದರೆ ಸುಮಾರು 20-25 ವರ್ಷ ಸದನದ ಸದಸ್ಯರಾಗಿ, ಮಂತ್ರಿಗಳಾಗಿ ಕೆಲಸ ಮಾಡಿದಂಥ ಹಿನ್ನಲೆಯಲ್ಲಿ, ಅವರು ಏಕಸ್ಮಾತ್ ಅಲ್ಲಿ ಹಾಜರಾಗಿದ್ದರೆ, ಏನೋ ತಪ್ಪು ಮಾಡುವುದಕ್ಕೆ ಹಾಜರಾಗಿದ್ದಾರೆ, ಪ್ರಭಾವ ಬೀರಲಿಕ್ಕೆ ಹಾಜರಾಗಿದ್ದಾರೆ ಎಂದು ಭಾವಿಸುವುದಾದರೆ....

ಶ್ರೀ ಧರ್ಮಸಿಂಗ್: ಈ ನೋಟೀಸ್ ನಮಗೆ ಬಂದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಸದಸ್ಯರೆ, ನೆನ್ನೆ ಹೇಳಿದ್ದಾರೆ, ಮಂತ್ರಿಗಳು ಅಲ್ಲಿಗೆ ಹೋಗಿ ಪ್ರಭಾವ ಬೀರುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅವರು ಮತದಾರರಾಗಿರುವುದರಿಂದ ಆ ಸಭೆಯಲ್ಲಿ ಹಾಜರಾಗಿ ತಮ್ಮ ಕರ್ತವ್ಯವನ್ನು ಪರಿಪಾಲನೆ ಮಾಡಿದ್ದಾರೆ. ಆದ್ದರಿಂದ ಇಲ್ಲಿ ಏನೋ ದೊಡ್ಡ ಘೋರ ಅಪರಾದ ಆಗಿದೆ ಎಂದು ಅಲ್ಲ, ಯಾವುದೋ ಒಂದು ಕ್ರಿಯೆಗೆ ಮತ್ತೊಂದು ಪ್ರತಿಕ್ರಿಯೆ ಆಗೆಯೇ ಆಗುತ್ತದೆ.

1.50 ಪಿ.ಎಂ

ಅಧ್ಯಕ್ಷರಾಗಿರತಕ್ಕಂಥವರು ತಮ್ಮ ಸಂಪೂರ್ಣವಾದ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕಾದಂಥ ಅಗತ್ಯವಿದೆ. ಆತ ಅಪ್ರಭುತ್ವದ ಮೂಲಕ ನಡೆದುಕೊಂಡಿರುವುದಕ್ಕಾಗಿ ಮತ್ತೊಂದು ಪ್ರತಿಕ್ರಿಯೆ ಆಗಿರಬಹುದು. ಯಾರೋ ಸದಸ್ಯರನ್ನು ಕೂರಿಸಿದರು.... ಎಂಬಿತ್ಯಾದಿಯಾಗಿ ಎಲ್ಲವೂ ಕೂಡ ಸತ್ಯಕ್ಕೆ ಬಾಹಿರವಾಗಿರತಕ್ಕಂಥದ್ದು. ಮಾನ್ಯ ಸದಸ್ಯರುಗಳವರು ಬಯಸುವುದಾದರೆ ಮಾನ್ಯ ಸಭಾಧ್ಯಕ್ಷರ ಚೇಂಬರ್‌ನಲ್ಲಿ ಆ ಕ್ಯಾಸೆಟ್‌ನ್ನು ಪ್ರದರ್ಶನ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಅದು ಏನೇ ಇರಲಿ, ಈಗ ಅವರು ಹೇಳತಕ್ಕಂಥಾದ್ದು ಈ

ರೀತಿಯಾಗಿ ಅನುಚಿತವಾಗಿ ವರ್ತನೆಯಾಗಿರುವುದರಿಂದ ಆ ತೀರ್ಮಾನವನ್ನು ತಡೆಹಿಡಿಯಬೇಕೆನ್ನುವುದು. ನನಗೆ ಒಪ್ಪಿಗೆ ಇಲ್ಲದಿದ್ದರೂ ಕೂಡ ನಾವು ಮಾಡಿರತಕ್ಕಂಥಾದ್ದು ಅಲ್ಲಿ ಅಧ್ಯಕ್ಷರ ಚುನಾವಣೆ ಮಾಡಿರತಕ್ಕಂಥಾದ್ದು ಏನಿದೆ, ಸದಸ್ಯರ ಚುನಾವಣೆಯಾಗಿರತಕ್ಕಂಥಾದ್ದು ಸರಿಯಾದಂಥಾದ್ದು ಮತ್ತು ಸಿಂಧುತ್ವವನ್ನು ಪಡೆದಿರತಕ್ಕದ್ದು ಎಂದು ಗೊತ್ತಿದ್ದರೂ ಕೂಡ, ನಾವೀಗ ಏನು ಹೇಳುತ್ತೇವೆ? ಏನೋ ಒಂದು ಬಹುಮತವನ್ನು ಕಳೆದುಕೊಂಡಿರತಕ್ಕಂಥದ್ದನ್ನು ಸಾಬೀತು ಮಾಡಲು ಏನು ತೊಂದರೆ ಇದೆ ಆದ್ದರಿಂದ ಈ ಸಂದರ್ಭದಲ್ಲಿ ನಾವು ಹೇಳುತ್ತೇವೆ, ಇನ್ನೂ ಒಮ್ಮೆ ಚುನಾವಣೆಯು ನಿಮಗೆ ಆಗಬೇಕೆನ್ನುವುದಾದರೆ, ಆ ಚುನಾವಣೆ ಪ್ರಕ್ರಿಯೆಯನ್ನು ಮಾಡಲು ನಾವು ತಯಾರಾಗಿದ್ದೇವೆ. ಎರಡನೇದಾಗಿ ಮುಂದುವರಿದಿರತಕ್ಕಂಥ ಸಭೆಯನ್ನು ನಡೆಸಿರತಕ್ಕಂಥದ್ದು ಅಸಿಂಧು ಎಂದು ತಾವೇನು ವಾದ ಮಾಡುತ್ತೀರಿ ಆ ವಾದವನ್ನು ನಾವು ಒಪ್ಪುವುದಿಲ್ಲ. ಆದರೆ ನಮ್ಮ ಸರಕಾರ ಪ್ರತಿಷ್ಟೆಯ ಮೇಲೆ ನಿಲ್ಲಲು ತಯಾರಾಗಿಲ್ಲ. ಸರಕಾರ ಬಹುಮತದ ಮೂಲಕ ನಡೆಸಬೇಕೆಂದು ಇದೆ. 23ನೇ ತಾರೀಖು ಗುಲ್ಬರ್ಗ ಜಿಲ್ಲಾ ಪಂಚಾಯತ್‌ನಲ್ಲಿ ನಡೆದಿರತಕ್ಕಂಥ ಎಲ್ಲಾ ನಡವಳಿಕೆಗಳೂ ಕಾನೂನು ಬದ್ಧವಾಗಿವೆ. ಆದರೆ ಬಹುಮತವನ್ನು ಮತ್ತೊಮ್ಮೆ ಸಾಬೀತು ಪಡಿಸಬೇಕೆನ್ನುವುದನ್ನು ತಾವು ಕೋರುವುದಾದರೆ ನಾವು ಮತ್ತೆ ಅವರಿಗೆ ಆದೇಶವನ್ನು ಕೊಡುತ್ತೇವೆ. ಈ ಆದೇಶದಲ್ಲಿ ಅಧ್ಯಕ್ಷರು ನಡೆದುಕೊಂಡಿರತಕ್ಕಂಥ ನಡವಳಿಕೆಗಳು ಕೂಡ, ನಾವು-ಸರಕಾರ ಇದನ್ನು ಖಂಡಿಸುತ್ತೇವೆ. ಎರಡನೆಯದಾಗಿ ಈ ಚುನಾವಣೆಗಳಲ್ಲಿ ನಡೆದಿರತಕ್ಕಂಥದ್ದಕ್ಕೆ ಮತೊಮ್ಮೆ ವೇಳಾಪಟ್ಟಿಯನ್ನು ಹಾಕಿ ಚುನಾವಣೆಯನ್ನು ಮಾಡಿ ಎಂದು ಹೇಳುತ್ತೇವೆ. ನಾವು ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕಂಥವರು ನಂಬಿಕೆ ಇಲ್ಲದಿರತಕ್ಕಂಥ ಜನರು ಯಾವುದೋ ತಾಂತ್ರಿಕ ಕಾರಣಗಳ ಮೂಲಕವಾಗಿ ಬಹುಮತ ಕಳೆದುಕೊಂಡಾಗ ಯಾವುದೋ ತರಹವಾಗಿರತಕ್ಕಂಥ ಮಾತುಗಳನ್ನು ಆಡುತ್ತಾರೆ. ಆದರೂ ಕೂಡ ಅಷ್ಟರಮಟ್ಟಿಗೆ ತಾವು ಜವಾಬ್ದಾರಿಯನ್ನು ಹೊರಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಸಿಕೊಳ್ಳ ಬಯಸುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಪಿ.ಪ್ರಕಾಶ್‌ರವರು ಈಗ ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಈ ಚುನಾವಣೆಯನ್ನು ಪುನಃ ನಾವು ಮಾಡುತ್ತೇವೆ, ಮತ್ತು ಈ ಒಂದು ಚನಾವಣೆಯಲ್ಲಿ ಯಾವ ಒಂದು ಅಕ್ರಮವೂ ಕೂಡ ನಡೆದಿಲ್ಲ, ಆದರೆ ಪ್ರಜಾಪ್ರಭುತ್ವದ ಒಂದು ನೀತಿಯ ಮೇಲೆ ಪುನಃ ಚುನಾವಣೆಯು ಆಗಬೇಕೆನ್ನುವಂಥ ಒಂದು ಬೇಡಿಕೆ ಏನಿದೆ, ಅದರ ಪ್ರಕಾರ ನಾವು ಪುನಃ ಚುನಾವಣೆ ಮಾಡುತ್ತೇವೆ ಎಂದು ಹೇಳಿದ್ದಾರೆ. ನಾನು ಅವರ ಈ ಹೇಳಿಕೆಯನ್ನು ಸ್ವಾಗತ ಮಾಡುತ್ತೇನೆ. ಒಂದು ಮಾತನ್ನು ನಾನು ಅವರ ನೆನಪಿಗೆ ತರುತ್ತೇನೆ. ಯಾಕೆಂದರೆ ಇದು ಪ್ರತಿಷ್ಟೆಯ ಪ್ರಶ್ನೆ ಅಲ್ಲ. ಮಾನ್ಯ ಅಧ್ಯಕ್ಷರೇ, ತಾವು ನನ್ನ

ಮಾತನ್ನು ನಂಬಿ. ಆ ಜಿಲ್ಲಾಪರಿಷತ್ ಕಾನ್ಸಿಟಿಟ್ಯೂಟ್ ಆಗಿದೆ, ಅಲ್ಲಿನ ವಾತಾವರಣವನ್ನು ನೋಡಿ ಒಂದು ದಿನವೂ ಕೂಡ ನಾನು ಅಲ್ಲಿ ಹಾಜರು ಆಗಿರಲಿಲ್ಲ. ಇದರ ಹಿಂದೆ ನಾನು ಏಳು ವರ್ಷಗಳ ಕಾಲ ವಿರೋಧಪಕ್ಷದಲ್ಲಿದ್ದರೂ ಕೂಡ ಪ್ರತಿಯೊಂದು ಮೀಟಿಂಗ್‌ಗೂ ಹೋಗುತ್ತಾ ಇದ್ದೆ. ಆವಾಗಲೂ ಕೂಡ ನಿಮ್ಮ ಅಧ್ಯಕ್ಷರೇ ಇದ್ದರು. ಈಕಾಲದಲ್ಲಿಯೂ ಕೂಡ ನಿಮ್ಮ ಅಧ್ಯಕ್ಷರೇ ಇದ್ದಾರೆ. ಈಗ ಇದ್ದವರೂ ನಿಮ್ಮ ಅಧ್ಯಕ್ಷರೇ. ಹಾಗಾಗಿ ಈಗ ಇರುವ ಅಧ್ಯಕ್ಷರೂ ನಮ್ಮ ಅಧ್ಯಕ್ಷರೇನಲ್ಲ. ಅವರು ಇವರ ಪಕ್ಷದಿಂದ ಆರಿಸಿ ಬಂದು, ಇವರು ಇವರಲ್ಲಿಯೇ ಭಿನ್ನಾಭಿಪ್ರಾಯ ಬಂದು ಹೊರಗೆ ಬಂದಂಥ ಜನ ಅವರಿಗೆ ಬೆಂಬಲವನ್ನು ಕಾಂಗ್ರೆಸ್‌ನವರು ಕೊಟ್ಟಿದ್ದಾರೆಯೇ ಹೊರತಾಗಿ ಅವರೇನೂ ನಮ್ಮ ಪಕ್ಷದವರಲ್ಲ ಮತ್ತು ನಾವು ಹೋಗಿ ಅವರನ್ನು ಕೂಡಿಸಿದವರು ಅಲ್ಲ. ಅದಕ್ಕೆ ಬಹುಶಃ ಇವರಿಗೆ ಟಿಕೇಟ್ ಕೊಡುವಾಗ ಅವರ ಎಲ್ಲಾ ಗುಣಗಳನ್ನು ನೋಡಿ ಪರಿಶೀಲನೆ ಮಾಡಿ ಕೊಟ್ಟಿರಬೇಕೆಂದು ಅಂದುಕೊಂಡಿದ್ದೇನೆ. ಅದನ್ನು ಬಿಟ್ಟು ಈಗ ಅವರು ಸರಿಯಾಗಿ ಇಲ್ಲ, ಅವರಿಗೆ ಪ್ರಬುದ್ಧತೆ ಇಲ್ಲ ಅವರಿಗೆ ಯಾವ ದೃಷ್ಟಿಯಿಂದ ನಡೆದುಕೊಳ್ಳಬೇಕೆಂಬುದು ಗೊತ್ತಿಲ್ಲ ಎಂಬುದು ಎರಡೂವರೆ ವರ್ಷಗಳ ಮೇಲೆ ಇವರಿಗೆ ಹೊಳೆದಿದೆ. ಎರಡುವರೆ ವರ್ಷಗಳ ಹಿಂದೆ ಅವರಿಗೆ ಟಿಕೇಟ್ ಕೊಟ್ಟು ಆರಿಸಿ ತರುವಾಗ ಈ ವಿಚಾರವು ಅವರಿಗೆ ಹೊಳೆದಿರಲಿಲ್ಲ. ನಿಜವಾಗಿಯೂ ಅಲ್ಲಿರತಕ್ಕಂಥ ಜಿಲ್ಲಾ ಪರಿಷತ್ ಅಧ್ಯಕ್ಷರು ಬಹಳ ಒಳ್ಳೆಯ ಮನುಷ್ಯರು. ನೀವು ಬೇಕಾದರೆ ಬೇರೆಯವರನ್ನು ಕೇಳಿಕೊಳ್ಳಿ. ಪರ್‌ಸನಲೀ, ಅವರು ತುಂಬಾ ಒಳ್ಳೆಯ ಮನುಷ್ಯರು. ನೀವು ನಿಯಮಾವಳಿಗಳ ವಿಚಾರದಲ್ಲಿ ಹೇಳ-ಬಹುದು. ನಿಯಮಾವಳಿಗಳನ್ನು ನೀವೂ ಕೂಡ ಗಾಳಿಗೆ ತೂರಿ ಹೋಗಿದ್ದೀರಿ. ಹಿಂದಿನ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲವಾದ ಕಾರಣ ನನಗೆ ಗೊತ್ತಿಲ್ಲದ ವಿಚಾರದ ಬಗ್ಗೆ ಗೊತ್ತಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಹಿಂದಿನ ನಡವಳಿಕೆಯಲ್ಲಿ ಅವರು ತನ್ನ ಅಧಿಕಾರವನ್ನು ಜಿಲ್ಲಾಪಂಚಾಯತಿಯ ಎಕ್ಸಿಕ್ಯೂಟಿವ್ ಆಫೀಸರ್‌ಗೆ ಕೊಟ್ಟರು, ಸಿಇಓರವರೇ, ಎಲೆಕ್ಷನ್ ಕಂಡಕ್ಟ್ ಮಾಡಬೇಕೆನ್ನುವುದು ಅದರಲ್ಲಿತ್ತು ಎನ್ನತಕ್ಕಂಥ ಮಾತು. ಅದು ಇದ್ದಿದ್ದರೆ ಸ್ಪೆಶಲ್ ಮೀಟಿಂಗ್ ಕರೆದು ಈ ಸ್ಟ್ಯಾಂಡಿಂಗ್ ಕಮಿಟಿ ಚುನಾವಣೆಗೆ ನೋಟೀಸ್ ಇಶ್ಯೂ ಮಾಡಿ, ಅವರ ಕೈಯಿಂದಲೇ ಅದನ್ನು ಕಳುಹಿಸಿ, ಅವರೇ ಪ್ರಿಸೈಡ್ ಮಾಡುತ್ತಾರೆ ಎಂದು ನೋಟಿಸ್ ಕೊಡುವ ಅವಶ್ಯಕತೆ ಇರಲಿಲ್ಲ. ಅವರು ಈಗಾಗಲೇ ಹಿಂದೆ ನೋಟೀಸ್ ಕೊಟ್ಟಿದ್ದಾರೆ. ಆ ನೋಟೀಸ್‌ನಲ್ಲೂ ಕೂಡ ಅಧ್ಯಕ್ಷರ ಹೆಸರೇ ಇದೆ. ಇದು ಏನು ತೋರಿಸುತ್ತದೆ ಅಂದರೆ, ಯಾವಾಗ ಇವರಲ್ಲಿ ಮತ್ತು ಅವರಲ್ಲಿ ವ್ಯತ್ಯಾಸ ಬಂತು, ಆವಾಗ ಈ ಪ್ರಶ್ನೆಯು ಉದ್ಭವಿಸಿತು. ಇಲ್ಲವಾದರೆ ಇವರು ಮೊದಲು ಏನು ನೋಟೀಸ್ ಕೊಟ್ಟಿದ್ದಾರೆ ಆ ನೋಟೀಸ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗೆಯೇ ನಮಗ್ಯಾರಿಗೂ ಕೂಡ ನೋಟೀಸ್ ಕೊಟ್ಟಿಲ್ಲ. ನಾವೆಲ್ಲರೂ ಕೂಡ ಜಿಲ್ಲಾ ಪರಿಷತ್ ಸದಸ್ಯರೇ. ಮಂತ್ರಿಗಳಿಗೂ ಕೂಡ ಓಟು ಮಾಡಬಹುದು. ಆದರೆ ಇದು ಸ್ಪೆಶಲ್ ಮೀಟಿಂಗ್ ಇದ್ದ ಕಾರಣ ಅವರಿಗೆ ಸ್ವಲ್ಪ

ತಪ್ಪು ತಿಳುವಳಿಕೆಯಾಗಿರಬಹುದು. ತಾವುಗಳು ಈ ಕುರಿತು ಅನೇಕರಿಗೆ ತಪ್ಪು ತಿಳುವಳಿಕೆಯ ಭಾವನೆ ಇದೆ ಎಂದು ಹೇಳಿದ್ದೀರಿ. ಅದೇ ರೀತಿಯಾಗಿ ಬಹುಶಃ. ಆ ತಪ್ಪು ತಿಳುವಳಿಕೆಯಾಗಿಯೇ ಯಾವ ಶಾಸಕರಿಗೂ ಕೂಡ ನೋಟೀಸ್ ಕೊಟ್ಟಿಲ್ಲ. ಇಲ್ಲಿ ಮಲಕರೆಡ್ಡಿಯವರು, ಧರ್ಮಸಿಂಗ್‌ರವರು, ನಾನು ಇದ್ದೇನೆ ಮತ್ತು ಅನೇಕ ಜನರಿದ್ದಾರೆ. ಬಹುಶಃ ಅವರಿಗೆ ನೋಟೀಸ್ ಬಂದಿಲ್ಲ ಎಂದು ತಿಳಿದುಕೊಂಡೇ ನಮ್ಮ ಮಾಲೀಕಯ್ಯ ಗುತ್ತೇದಾರ್‌ರವರು ತಮ್ಮ ಟೂರ್ ಪ್ರೋಗ್ರಾಮನ್ನು ಕೂಡ ಆ ದಿವಸ ಎಲ್ಲಿ ಹಾಕಿದ್ದರು ಅಂದರೆ, ಸಿಮೆಂಟ್ ವರ್ಕರ್ಸ್ ಮತ್ತು ಲಾರಿ ಮಾಲೀಕರ ಸಂಘ-ಗುಲ್ಬರ್ಗ, -ಇವರ ಸಭೆಯಲ್ಲಿ ಭಾಗವಹಿಸುವುದು. ಅದು ಒಂದು ಗಂಟೆಗೆ. ತದನಂತರ ಸನ್ಮಾನ್ಯ ಡಿ.ದೇವರಾಜ ಅರಸರ ಜನ್ಮದಿನಾಚಾರಣೆ ಆಚರಣೆ ಮಾಡುವುದು. ಇದೆಲ್ಲಾ ಕಾರ್ಯಕ್ರಮಗಳು ಇದ್ದಾವೆ. ಅದಕ್ಕಾಗಿ ಎಲ್ಲಿಯೂ ಕೂಡ ಇದನ್ನು ನಮೂದು ಮಾಡಿಲ್ಲ. ಅಂದರೆ ಮಂತ್ರಿಯವರ ಟೂರ್ ಪ್ರೋಗ್ರಾಂ ಕೂಡ ಹೀಗೆ ಇದೆ. ಅದನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅಂದರೆ ಇದರಲ್ಲಿ ಭಾಗವಹಿಸಬೇಕೆಂಬ ಇಂಟೆನ್‌ಶನ್ ಅವರಲ್ಲಿ ಇರಲಿಲ್ಲ. ಸಭೆಗೆ ಹಾಜರಾಗಬೇಕೆಂಬ ಇಂಟೆನ್‌ಶನ್ ಅವರಲ್ಲಿ ಇರಲಿಲ್ಲ. ನಮಗೆ ಯಾರಿಗೂ ಕೂಡ ನೋಟೀಸ್ ಬರಲಿಲ್ಲ. ತಪ್ಪು ತಿಳುವಳಿಕೆಯಿಂದಲೋ ಅಥವಾ ಸ್ಪೆಶಲ್ ಮೀಟಿಂಗ್ ಇದೆ, ಸ್ಟಾಂಡಿಂಗ್ ಕಮಿಟಿ ಮೆಂಬರ್ಸ್ ನಾವೇ ಆಯ್ಕೆ ಮಾಡಿಕೊಳ್ಳಬೇಕು. ನಮ್ಮಲ್ಲಿ ಎಲೆಕ್ಟ್ ಆದವರಲ್ಲಿಯೇ ಮೆಂಬರ್ಸ್ ಆಗಬೇಕು. ಅದಕ್ಕಾಗಿ ಅವರ ಅವಶ್ಯಕತೆ ಇಲ್ಲ ಎಂದು ಇವರಿಗೆ ಕೊಟ್ಟಿರಲಿಕ್ಕಿಲ್ಲ. ಆದರೆ ನೋಟೀಸ್ ಬಂದಿಲ್ಲ ಎಂಬ ಮಾತಂತೂ ಸತ್ಯ. ಅಂದಾಗ ಎಲ್ಲರೂ ಹೋಗದೇ ಇದ್ದಾಗ ತಾವೇ ಹೋಗಬೇಕೆಂದು ಅಂದಾಗ ಅದಕ್ಕೆ ಒಂದು ಸ್ಪೆಶಲ್ ಕಾರಣ ಬೇಕು. ಅದು ಆದಮೇಲೆ ಮೀಟಿಂಗ್ ಪ್ರಾರಂಭದಲ್ಲಿಯೇ, ಇಲ್ಲ ಡೆವಲಪ್‌ಮೆಂಟ್ ಮೀಟಿಂಗ್ ಇದೆ, ಅದನ್ನು ರಿವ್ಯೂ ಮಾಡಲು ಹೋಗಿದ್ದಾರೆ, ನೋಡಲು ಹೋಗಿದ್ದಾರೆ ಎಂದಾದರೂ ಆಗಬೇಕು. ಟೈಂ ಟೇಬಲ್‌ನ ಪ್ರಕಾರ ತಾವು 16 ಜನವರಿಗೆ ಒಳಗೆ ಕರೆದುಕೊಂಡು ಹೋಗುತ್ತೀರಿ ಅಂದರೆ, ಇದು ಯಾವ ನ್ಯಾಯ? ಇದನ್ನು ಇಲ್ಲ ಅಂದರೆ ಔಟ್‌ಸೈಡ್‌ನಲ್ಲಿ ತೆಗೆದ ಕ್ಯಾಸೆಟ್ ಇದೆ. ಒಳಗಿನ ಕಲಾಪಗಳನ್ನು ತಾವು ತೋರಿಸುತ್ತೇವೆಂದು ಹೇಳಬಹುದು ನಮ್ಮಲ್ಲಿ ಹೊರಗಡೆಯಿಂದ ತೆಗೆದುಕೊಂಡ ಫೋಟೋಗಳು ಇವೆ, ಅದನ್ನು ತೋರಿಸುತ್ತೇವೆ. ಯಾವರೀತಿಯಾಗಿ ಹೋದರು, ಯಾವ ರೀತಿಯಾಗಿ ಎಂಟರ್ ಆದರು ಎಂದು. ಇದು ನಡೆದಿರುವ ವಿಚಾರ. ಅದಕ್ಕಾಗಿ ನಾನು ಪುನಃ ಬಹಳ ವಿವರವಾಗಿ ಹೋಗುವುದಿಲ್ಲ. ಇದನ್ನು ಪುನಃ ನಾನು ಕೆದಕಲು ಹೋಗುವುದಿಲ್ಲ. ಪುನಃ ಚುನಾವಣೆ ಮಾಡಬೇಕೆಂದು ತಾವು ಒಪ್ಪಿಕೊಂಡಿದ್ದೀರಿ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ತಾವುಗಳು ಪುನಃ ಚುನಾವಣೆ ನಡೆಸಿರಿ. ಅದರಲ್ಲಿ ಯಾರೇ ಬರಲಿ. ಇದರಲ್ಲಿ ನಮ್ಮ ಯಾವ ಪ್ರತಿಕ್ಷೆಯೂ ಇಲ್ಲ. ನಮ್ಮವರು ಯಾರೂ ಅಧ್ಯಕ್ಷರಾಗುವವರಿಲ್ಲ, ಸ್ಟಾಂಡಿಂಗ್ ಕಮಿಟಿಗೂ ಬರುವವರಲ್ಲ, ನಿಮಗೆ ಅವಕಾಶ ಇದೆ. ಇನ್ನೂ ಎರಡು ವರ್ಷ ಆಳಿ. ನಮಗೆ ಯಾವಾಗ ಸಮಯ

ಬರುತ್ತದೆಯೋ ಆವಾಗ ನಾವು ಆಳುತ್ತೇವೆ. ಆದರೆ ಸುಮ್ಮನೆ ನೀವು ಗೂಬೆ ಕೂಡಿಸಬೇಡಿ. ಸುಮ್ಮನೆ ನಾವು ಪ್ರಸ್ತಾಪ ಮಾಡಿದ್ದೇವೆ, ಅದರಲ್ಲಿ ಏನೂ ಹುರುಳಿಲ್ಲ, ಅಥವಾ ಅಲ್ಲಿ ಏನೂ ನಡೆದೇ ಇಲ್ಲ ಎನ್ನತಕ್ಕಂಥಾದ್ದು ಬೇಡ. ನಡೆದಿದೆ, ಅದಕ್ಕೆ ತಾವು ಏನೋ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಂಡು ಚುನಾವಣೆ ಮಾಡಬೇಕೆಂದು ಹೇಳಿದ್ದೀರಿ. ಅದಕ್ಕಾಗಿ ನಾನು ಮುಂದಿನ ವಿಷಯವನ್ನು ಪ್ರಸ್ತಾಪ ಮಾಡದೇ ಇಷ್ಟಕ್ಕೇ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಧರ್ಮಸಿಂಗ್ (ಜೇವರ್ಗಿ): ನಿನ್ನೆ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಮಾನ್ಯ ಸಿದ್ದರಾಮಯ್ಯನವರೇ, ತಾವು ಇರಲಿಲ್ಲ. ಇವತ್ತು ಹೇಳತಕ್ಕಂತಹ ಉತ್ತರದಲ್ಲಿ ಬಹಳ ಸುತ್ತಿ ಸುತ್ತಿ ಜಿಲ್ಲಾಪರಿಷತ್ತಿನಲ್ಲಿ ಕೆಲಸಕಾರ್ಯಗಳು ಆಗುತ್ತಿಲ್ಲವೆಂದು ಪ್ರಸ್ತಾಪ ಮಾಡಿದ್ದೀರಿ. 4-5 ವರ್ಷ ಇದೇ ರೀತಿ ನಡೆಯುತ್ತಿದೆ ಆದರೆ ಇದಕ್ಕೆ ನಾವು ಜವಾಬ್ದಾರರಲ್ಲ ಆ ಜವಾಬ್ದಾರಿ ನಿಮ್ಮದೇ. ನೀವೇ ಮಂತ್ರಿಯಾಗಿದ್ದೀರಿ ಅಲ್ಲಿ ಕೆಲಸ ಕಾರ್ಯಗಳಾಗುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಕೂಡ ಬಂದಿದೆ. ಗುಲ್ಬರ್ಗ ಜಿಲ್ಲಾ ಪರಿಷತ್ತು ಯಾವ ರೀತಿಯಾಗಿ ನಡೆಯುತ್ತಿದೆ ಎಂಬುದು ಜನರ ಮನಸ್ಸಿಗೆ ಕೂಡ ಬಂದಿದೆ. That is the public opinion there. ನಿನ್ನೆ ಅಡ್ಜರ್ನ್ ಮೀಟಿಂಗ್ ಇತ್ತು ಅವರು ಬಂದಿದ್ದಾರೆ. ಅರ್ಧ ಗಂಟೆ ಅವರು ಅಲ್ಲಿ ಇದ್ದರು. ವೆಲ್‌ಕಂ ಮಾಡಿದ್ದಾರೆ. ಮಾಡಿದ ಮೇಲೆ ಗಲಾಟೆಯಾಗತಕ್ಕಂತಹ ಸಮಯದಲ್ಲಿ ಇನ್ನೂ ಕೂಡ ಇಬ್ಬರು ಸದಸ್ಯರು ಮೆಘ ಕುಲಕರ್ಣಿ (ಇವರು ನಮ್ಮ ಮಾನ್ಯ ದರ್ಶನಾಪುರ ಅವರ ಕ್ಷೇತ್ರದವರು) ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ಇನ್ನೂ ಟ್ರೇಸಬಲ್ ಇಲ್ಲ. ಮತ್ತೊಬ್ಬರು ಮಲ್ಲಣ್ಣ ಯಾದಗಿರಿ ಎಂಬುವವರು ನನ್ನ ಕ್ಷೇತ್ರದವರು. ನೀವೇನು ಮಾಡುತ್ತಿದ್ದೀರಿ ಅದನ್ನು ನಿನ್ನೆ ಕೂಡ ಹೇಳಿದ್ದೇನೆ. ಚೇವರ್ಗಿ ಮತ ಕ್ಷೇತ್ರದಲ್ಲಿ 5ರಲ್ಲಿ ನಾವು 4ರಲ್ಲಿ ಗೆದ್ದಿದ್ದೇವೆ. ಪಂಚಾಯತಿ ನಮ್ಮದೇ ಇದೆ 19ಕ್ಕೆ 19 ನಾವೇ ಬಂದಿದ್ದೇವೆ. ಮಾನ್ಯ ಸಿದ್ಧರಾಮಯ್ಯನವರೇ ತಮ್ಮ ಪಕ್ಷದವರು ಜೇವರ್ಗಿಯ ಮೇಲೆ ಪ್ರಹಾರ ಮಾಡುತ್ತಿದ್ದೀರಿ. ಮಲ್ಲಣ್ಣ ಯಾದಗಿರಿ ಮತ್ತು ಮೇಘಾ ಕುಲಕರ್ಣಿ ಎಂಬುವವರು ಒಂದು ಮನೆಯಲ್ಲಿ ಇದ್ದಾರೆ. ಜಹನತ್ ಬೀ ಅವರು ಬಂದ ಹಾಗೆ ಜನತಾ ದಳದ ಮಂತ್ರಿಗಳ ಹಿಂದೆ ಬರತಕ್ಕಂತಹ ಕಾರಿನಲ್ಲಿ ಬಂದಹಾಗೆ ನಮ್ಮ ಪಕ್ಷದವರು ನೋಡಿ ಬಂದ ಹಾಗೆ ಆ ಕಡೆ ಬಂದರು ಬಂದು ಕಾಲಿಗೆ ಬಿದ್ದು ಆಕೆ ನಾನು ಒಂದು ಕಡೆ ಇದ್ದೆ ಈಗ ಬಂದಿದ್ದೇನೆ ಎಂದು ಹೇಳಿದರು. ಮತ್ತು ಮಲ್ಲಣ್ಣ ಯಾದಗಿರಿ ಕೂಡ ಅಲ್ಲಿ ಇದ್ದಾರೆ ಎಂದು ಹೇಳಿದರು. ಆದರೆ ಎಲ್ಲಿ ಇದ್ದರು, ಏನು ಅದು, that is your Government's responsibility. ಅವರು ಆ ಜಿಲ್ಲೆಯಲ್ಲಿ ಯಾರು ಉಸ್ತುವಾರಿ ವಹಿಸಿದ್ದರು, ಅವರ ಜವಾಬ್ದಾರಿ ಮತ್ತು ಅಲ್ಲಿರತಕ್ಕಂತಹ ಎಸ್.ಪಿ. ಯವರ ಜವಾಬ್ದಾರಿ ಯಾಗಿದೆ. ಮುಂದೆ ಕೂಡ ನಡೆಸತಕ್ಕಂತಹ ಕಾಲದಲ್ಲಿ you have to give protection to all the members. ಇವತ್ತು ಪ್ರಜಾತಂತ್ರದ ಬಗ್ಗೆ

ಮಾತನಾಡುತ್ತಿದ್ದೀರಿ. ಪ್ರತಿಯೊಬ್ಬ ಜಿಲ್ಲಾ ಪರಿಷತ್ತಿನ ಸದಸ್ಯರು ಸ್ವತಂತ್ರವಾಗಿ ಬಂದು ಹಾಜರಾಗಲಿಕ್ಕೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ತಾವು ಹೇಳಬೇಕು. ಗುಲ್ಬರ್ಗ ಜಿಲ್ಲಾಪರಿಷತ್ತಿನಲ್ಲಿ ಇಲ್ಲಿಯವರೆಗೆ ಈ ರೀತಿಯಾದ ವ್ಯವಹಾರ ಎಲ್ಲಿಯೂ ನಡೆದಿಲ್ಲ. ಜನರಿಗೆ ಇದು ಗೊತ್ತಾಗಬೇಕು. ನಾನು ಗುಲ್ಬರ್ಗದಲ್ಲಿ ಅಂದು ಇದ್ದೆ. ತಮಗೆ ಮುಖ್ಯಮಂತ್ರಿಗಳ ಕಾರ್ಯಕ್ರಮ ಇತ್ತೆಂದು ಕಾಣುತ್ತದೆ. ತಾವು ಹೇಳಿದಿರಿ ಎಲ್ಲರಿಗೂ ಕಳುಹಿಸಿದ್ದೇವೆಂದು ಆದರೆ ನನಗೆ, ಹಾಗೂ ಮಾನ್ಯ ಮಲಕರೆಡ್ಡಿಯವರಿಗೆ ಬರಲಿಲ್ಲ. ನಾನು ಗುಲ್ಬರ್ಗದಲ್ಲಿ ಇದ್ದೆ. ನಾನು ನೋಟೀಸ್ ಬಂದಿದೆಯೇ ಎಂದು ಕೇಳಿದ್ದೆ. ನೋಟೀಸೇನಾದರೂ ಬಂದಿದ್ದರೆ ನಾನು ಹೋಗುತ್ತಿದ್ದೆ. ಅವರಿಗೆ ಬಂದಿರಬಹುದು ಹೋಗಿರಬಹುದು ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದು ಅವಶ್ಯಕತೆ ಇಲ್ಲ. What was the scene there? ಮಾನ್ಯ ಪ್ರಕಾಶ್‌ರವರೇ, ತಾವೂ ಪೊಲೀಸ್ ಅಧಿಕಾರಿಗಳನ್ನು ಸಂಪರ್ಕ ಮಾಡಿ. ನಾವು ಯಾವಾಗಲೂ ಕೂಡ we have not cultivated this habit. ಇವತ್ತು ನಿಮಗೆ ಅಧಿಕಾರ ಸಿಕ್ಕಿದೆ ಅರ್ಜ್ಜನ್ ಸಭೆಗೆ ಅವರೆಲ್ಲಾ ಹೋದ ಮೇಲೆ ಅರ್ಧ ಗಂಟೆಯಾದ ಮೇಲೆ ಮೆಜಾರಿಟಿ ಮೇಲೆ ಸ್ಥಾಯಿ ಸಮಿತಿಗಳ ಚುನಾವಣೆಯಾಗತಕ್ಕಂತಹ ರೀತಿಯಲ್ಲಿ ಮಾಡಿದ್ದೇವೆ ಎನ್ನತಕ್ಕಂತಹ ಫಿಲಾಸಫಿ ನಮಗೆಲ್ಲಾ ಗೊತ್ತಿದೆ ತಮ್ಮ ಬಗ್ಗೆ ಹೆಚ್ಚಿನ ಗೌರವ ಇದೆ. ಆದರೆ ಗುಲ್ಬರ್ಗ ಜಿಲ್ಲೆಯಲ್ಲಿ ಏನು ಆಗುತ್ತಿದೆ ಅದನ್ನು ಯಾರೂ ಕೂಡ ಇದನ್ನು ಅಪ್ರಿಷಿಯೇಟ್ ಮಾಡುತ್ತಿಲ್ಲ. ನಿಮ್ಮ ಕ್ರಮವನ್ನು ಯಾರೂ ಕೂಡ ಅಪ್ರೀಷಿಯೇಟ್ ಮಾಡುತ್ತಿಲ್ಲ. ಇನ್ನೊಮ್ಮೆ ತಾವು ಸ್ವತಂತ್ರವಾಗಿ ಮಾಡಿ. ನಮಗೇನೂ ಬೇಕಾಗಿಲ್ಲ ಇದರಲ್ಲಿ ನಮಗೆ ಇಂಟರೆಸ್ಟ್ ಇಲ್ಲ ಪ್ರಚೋದನೆಯನ್ನು ನಾವು ಇದಕ್ಕೆ ಎಂದೂ ಮಾಡುವುದಿಲ್ಲ. ಗುಲ್ಬರ್ಗ ಜನರಿಗೆ ಗೊತ್ತಿದೆ. ನಾವು ಮಂತ್ರಿಯಾಗಿ ಕೆಲಸ ಮಾಡಿದಾಗ ಕೂಡ ಇಂತಹ ವ್ಯವಹಾರ ಮಾಡಿಲ್ಲ ಈಗಲೂ ಮಾಡುತ್ತಿಲ್ಲ. ಅಲ್ಲಿ ಅಡ್ಜರ್ನ್ ಸಭೆಗೆ ಸ್ವಾತಂತ್ರ್ಯವಾಗಿ ಸ್ಥಾಯಿ ಸಮಿತಿಗಳನ್ನು ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಿ. That is your responsibility. ಎಲ್ಲಾ ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಹಾಜರಾಗತಕ್ಕಂಥ ಸದಸ್ಯರಿಗೆ ರಕ್ಷಣ ಏನು ಇದೆ that is Government's responsibility. ಇದಕ್ಕೆ ಸರಕಾರ ಜವಾಬ್ದಾರಿ. ಸರಕಾರ ಇವರಿಗೆ ರಕ್ಷಣೆ ಕೊಡತಕ್ಕಂತಹ ಕೆಲಸ ಮಾಡಬೇಕು.

+ ಶ್ರೀ ರೇವು ನಾಯ್ಕ್ (ಕಮಲಾಪುರ): ಗುಲ್ಬರ್ಗ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಅಂದರೆ ಗುಲ್ಬರ್ಗ ಜಿಲ್ಲೆಯಲ್ಲಿ ಅರ್ಧ ಭಾಗಕ್ಕೆ ಬರುತ್ತಿದೆ. ಅಲ್ಲಿನ ಅಭಿವೃದ್ಧಿ ಕೆಲಸಗಳ ಕಡೆಗೆ ಯಾರೂ ಗಮನ ಹರಿಸುತ್ತಿಲ್ಲ. ಎರಡೂ ಪಾರ್ಟಿಯವರು ಮೀಟಿಂಗ್‌ಗಿಂತ ಮೆಜಾರಿಟಿ ಮಾಡಿಕೊಳ್ಳಬೇಕು ಅದು ಮಾಡಬೇಕು ಇದು ಮಾಡಬೇಕು ಎಂದು ಇದನ್ನೇ ಎರಡೂ ಕಡೆಯವರು ಮಾಡುತ್ತಿದ್ದಾರೆ. ಆ ಅಭಿವೃದ್ಧಿ ಕಡೆಗೆ ಯಾರೂ ಗಮನ ಹರಿಸುತ್ತಿಲ್ಲ. ಬಹಳ ನೊಂದು ಇದನ್ನು ಇಲ್ಲಿ ಹೇಳುತ್ತಿದ್ದೇನೆ. ವಾಟರ್ ಸಪ್ಲೈ ಬಹಳಷ್ಟು ಕುಂಠಿತಗೊಂಡಿದೆ. ಪೈಪ್ ಖರೀದಿ

ಮಾಡಬೇಕಾದರೆ ಪರ್ಚೆಸ್ ಸಮಿತಿ ಬೇಕು ಸ್ಥಾಯಿ ಸಮಿತಿ ಬೇಕು. ಅದು ಇದುವರೆಗೆ ಆಗಿಲ್ಲ. ಪರ್ಚೆಸ್ ಸಮಿತಿ ಮಾಡಬೇಕು. ಪೈಪ್ ಖರೀದಿ ಮಾಡಬೇಕಾದರೆ ಪರ್ಚೆಸ್ ಸಮಿತಿ ಬೇಕು ಸ್ಥಾಯಿ ಸಮಿತಿ ಬೇಕು. ಹಳ್ಳಿಯ ಜನರಿಗೆ ನೀರು ಇಲ್ಲ. ಮೀಟಿಂಗ್ ಬಂತು ಎಂದರೆ ಜಿಲ್ಲಾ ಪರಿಷತ್ ಅಧ್ಯಕ್ಷರು ಭಯಭೀತರಾಗುತ್ತಾರೆ. ಆ ಸಭೆಗೆ ಹೋಗಬೇಕಾದರೆ ಭಯಭೀತರಾಗುತ್ತಾರೆ. ನಿಮ್ಮ ರೋಸ್ಟರ್ ಪ್ರಕಾರ ಮಹಿಳೆಯರು ಬಡಜನರು ಆರಿಸಿ ಬಂದಿದ್ದಾರೆ. ಆದರೆ ಆ ಸಭೆಗೆ ಹೋಗಬೇಕಾದರೆ ಭಯ ಬೀಳುತ್ತಾರೆ. ಯಾವ ರೀತಿ ಸರಿಪಡಿಸುತ್ತೀರೋ ಗೊತ್ತಿಲ್ಲ ಅಂತೂ ಇದನ್ನು ಸರಿಪಡಿಸಬೇಕು. ತಾಲ್ಲೂಕು ಪಂಚಾಯತಿ ಜಿಲ್ಲಾ ಪರಿಷತ್ ಎರಡೂ ಕೂಡ ಅದೇ ರೀತಿಯಾಗಿದೆ. ಎರಡನ್ನೂ ಸರಿಪಡಿಸಬೇಕು. ಅದೇ ಜಿಲ್ಲಾವಾರು ಗುಲ್ಬರ್ಗಕ್ಕೆ ಇಲ್ಲ. ಬೇರೆ ಕಡೆ ಯಾವ ರೀತಿ ಇದೆ ನಾನು ಕೇಳಿಲ್ಲ. ವಾಟರ್ ಸಪ್ಲೈ ಸರಿಯಾಗಿ ಆಗುತ್ತಿಲ್ಲ ಇದಕ್ಕೆ ಕಾರಣ ಪೈಪ್ ಇಲ್ಲ. ಪರ್ಚೆಸ್ ಸಮಿತಿ ಮಾಡಬೇಕೆಂದು ಹೇಳುತ್ತಾರೆ. ಇದುವರೆಗೆ ಸ್ಥಾಯಿ ಸಮಿತಿ ಮಾಡಿಲ್ಲ ಇದರಿಂದಾಗಿ ಯಾವುದೇ ಕೆಲಸವಾಗುತ್ತಿಲ್ಲ. ಜಿಲ್ಲಾ ಪಂಚಾಯತಿ ತಾಲ್ಲೂಕು ಪಂಚಾಯತಿಯಲ್ಲಿ ಎರಡೂ ಕಡೆಯವರೂ ಎರಡು ಪಾರ್ಟಿಯವರು ಅಲ್ಲಿ ಇದ್ದಾರೆ. ಖರೀದಿ ಮಾಡಬೇಕಾಗಿದೆ. ಜಿಲ್ಲಾ ಸದಸ್ಯರು, ತಾಲ್ಲೂಕು ಪಂಚಾಯತಿ ಸದಸ್ಯರು ಸಭೆಗೆ ಹೋಗಬೇಕಾದರೆ ಭಯ ಭೀತರಾಗುತ್ತಾರೆ ನಾನೂ ಕೂಡ ಸಭೆಗೆ ಹೋಗಿಲ್ಲ. ಅಂತಹ ಗದ್ದಲದಲ್ಲಿ ನಾನು ಹೋಗಿಲ್ಲ. ಇದನ್ನು ಹೇಗೆ ಸರಿಪಡಿಸುತ್ತಾರೋ ಹೇಗೆ ಒಳ್ಳೆಯ ಹೆಸರು ಪಡೆದುಕೊಳ್ಳುತ್ತಾರೋ ಎಂದು ಸರಕಾರವನ್ನು ಕೇಳುತ್ತಿದ್ದೇನೆ.

+ ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ಖಾತೆ ರಾಜ್ಯ ಸಚಿವರು): ಕಾಂಗ್ರೆಸ್‌ನವರು ಚುನಾಯಿತ ಸದಸ್ಯರು ಇದ್ದಾರೆ ಹಿರಿಯ ಸದಸ್ಯರಾದ ಧರ್ಮಸಿಂಗ್‌ರವರು ಮೇಘಾ ಕುಲಕರ್ಣಿಯವರ ಬಗ್ಗೆ ಪ್ರಸ್ತಾಪ ಮಾಡಿದರು. ಮೇಘಾ ಕುಲಕರ್ಣಿಯವರು ಮೊದಲು ಜನತಾ ದಳದವರು ಆಗಿದ್ದರು. ಅವರು ಕಾಂಗ್ರೆಸ್ ಪಕ್ಷದಿಂದ ಆರಿಸಿ ಬಂದರು. ಸುಮಾರು 2 ತಿಂಗಳಿನಿಂದ ಆ ಪಕ್ಷದ ಸದಸ್ಯರ ಜೊತೆ ಅವರು ಯಾರೂ ಸಂಪರ್ಕ ಇಟ್ಟಿಲ್ಲ. ನಮ್ಮ ಪಕ್ಷದ ಸದಸ್ಯರ ಜೊತೆಯಲ್ಲಿ ಇದ್ದಾರೆ. ಸುಮಾರು 8-10 ದಿವಸದಿಂದ ಅವರನ್ನು ಕೂಡಿ ಹಾಕಿದ್ದಾರೆಂದು ಅವರು ಹೇಳಿದ್ದಾರೆ. ಸುಮಾರು 8-10 ದಿವಸದಿಂದ ಚುನಾವಣೆಯಾಗುವುದಕ್ಕೆ ಮೊದಲು ಮತ್ತು ಈಗಲೂ ಕೂಡ, ನಾನು ನಿನ್ನೆ ಪೊಲೀಸ್ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಯಾರೂ ಇದರ ಬಗ್ಗೆ ದೂರು ಕೊಟ್ಟಿಲ್ಲ ಬರೀ ಅವರು ಹೇಳುವ ಪ್ರಕಾರ ಕ್ಯಾಂಡಿಡೇಟ್ ಇಲ್ಲೇ ಇದ್ದಾರೆ. ಅವರ ತಂದೆ ತಾಯಿ ಗಂಡ ಇದ್ದಾರೆ ಹೊರಗೆಲ್ಲಾ ಓಡಾಡುತ್ತಿದ್ದಾರೆ. ಜಿಲ್ಲಾ ಪರಿಷತ್ತಿನ ಚುನಾವಣೆಗೆ ಕೂಡ ಮೇಘಾ ಕುಲಕರ್ಣಿಯವರ ಗಂಡ ಬಂದಿದ್ದರು. ನಾವು ನಿಮ್ಮ ಪರವಾಗಿ ವೋಟು ಹಾಕುತ್ತೇವೆ ನಾವು ಇಲ್ಲಿ ಬರುತ್ತೇವೆಂದು ಹೇಳಿದರೂ ಕೂಡ ನಾವು ಬೇಡವೆಂದು ಹೇಳಿದ್ದೆವು. ನಾವು ಮೆಜಾರಿಟಿ ಇದ್ದೇವೆಂದು ಹೇಳಿದ್ದೇವೆ.

ಮಲ್ಲಣ್ಣ ಪೂಜಾರಿ ಮತ್ತು ಜೀನಾಬಾಯಿ ಅಲ್ಲಿಗೆ ಬಂದಾಗ ಮಾಡಿಕೊಂಡ ವಿಡಿಯೋ ರೆಕಾರ್ಡಿಂಗ್ ಇದೆ ಅದನ್ನೂ ನೋಡಬಹುದು. ಒಳಗೆ ಕೂಡ ಅಧ್ಯಕ್ಷರು ಏನೂ ರಕ್ಷಣೆ ಇಲ್ಲವೆಂದು ಹೇಳಿದ್ದಾರೆ. ಒಳಗೆ ಸಹಿ ಮಾಡಿರತಕ್ಕಂತಹ ಸುಮಾರು 60-65 ಜನ ಇದ್ದಾರೆ. ಎಲ್ಲೋ ಕೂಡಿ ಹಾಕಿದ್ದಾರೆಂದು ಹೇಳುತ್ತಾರೆ. ಇದು ಬಹಳ ಅಸತ್ಯವಾದ ವಿಚಾರ. ಅವರು ಎಲ್ಲೋ ಮನಸ್ಸಿಗೆ ಬಂದ ಕಡೆಯಲ್ಲಿ ಇದ್ದಿರಬಹುದು. ಆದರೆ ಅವರ ಮನೆಯವರೂ ಕೂಡ ಇದ್ದಾರೆ. ಅಂತಹ ಸಂಶಯವಿದ್ದಲ್ಲಿ ಯಾವುದೇ ಒಬ್ಬ ಹೆಣ್ಣುಮಗಳು 8-10 ದಿನಗಳಿಂದ ಇಲ್ಲವೆಂದರೆ ಸ್ಟೇಷನ್‌ಗೆ ದೂರು ಕೊಡುತ್ತಿದ್ದರು. 8-10 ದಿವಸವಾದರೂ ಇಲ್ಲವೆಂದು ಕೂಡಿ ಹಾಕಿದ್ದಾರೆಂದರೆ ದೂರು ಕೊಡುತ್ತಿದ್ದರು. ಗಂಡು ಮಕ್ಕಳನ್ನು ಕಿಡ್ನ್ಯಾಪ್ ಮಾಡಿದ್ದರೆ ಅದು ಬೇರೆ ವಿಚಾರ. ಒಬ್ಬ ಹೆಣ್ಣು ಮಗಳು ಜಿಲ್ಲಾಪರಿಷತ್ ಸದಸ್ಯರು ಎಲ್ಲೋ ಹೋಗಿದ್ದರೆ ಅವರನ್ನು ಕೂಡಿ ಹಾಕಿದ್ದಾರೆ ಎಂದರೆ ಇದು ಸತ್ಯಕ್ಕೆ ದೂರವಾದ ವಿಚಾರವೆಂದು ಸದನಕ್ಕೆ ತಿಳಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ: ಬಹಳ ವಿಚಾರಗಳಲ್ಲಿ ಇಲ್ಲಿ ಚರ್ಚೆ ಮಾಡುವುದು ಅಗತ್ಯ ಇಲ್ಲ. ನಾವೆಲ್ಲಾ ಜಾಣ ಕುರುಡರು ಜಾಣ ಕಿವುಡರಾಗಿರುತ್ತೇವೆ. ನಮಗೆ ಏನೇನು ಸಂದರ್ಭವಿರುತ್ತದೆ ಅದನ್ನು ಆಗ ಉಪಯೋಗಿಸುವುದು. ಮಾನ್ಯ ವಿರೋಧ ಪಕ್ಷದ ನಾಯಕರು ಉಳಿದ ವಿಚಾರಗಳ ಬಗ್ಗೆ ಮಾತನಾಡಿ ನಾವು ಹೇಗೆ ಸರಕಾರದವರು ದೊಡ್ಡತನವನ್ನು ತೋರಿಸಿ ನ್ಯಾಯಬದ್ಧವಾಗಿ ಚುನಾವಣೆಯನ್ನು ಇನ್ನೊಂದು ಸಲ ಮಾಡುತ್ತೇವೆಂದು ಹೇಳಿದ್ದೇವೆ, ಅಷ್ಟೇ ಹೃದಯ ವೈಶಾಲ್ಯವನ್ನು ಮತ್ತು ಘನತೆಯನ್ನು ಅವರು ತೋರಿಸಬಹುದಾಗಿತ್ತು. ಅಧ್ಯಕ್ಷರೇ, ಫೋಟೋ ಕಾಪಿಯನ್ನು ನಾನು ಕಳುಹಿಸಿದ್ದೇನೆ. ಅದನ್ನು ಹೊಡೆದು ಹಾಕಿದ್ದಾರೆ. ಇದರ ವಿಚಾರ ನನಗೆ ಗೊತ್ತಿಲ್ಲವಾದ್ದರಿಂದ ನಾನು ಹೇಳುವುದಿಲ್ಲವೆಂದು ಬಹಳ ಜಾಣತನದಿಂದ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನನಗೆ ಪ್ರೊಸೀಡಿಂಗ್ಸ್ ಗೊತ್ತಿಲ್ಲವಲ್ಲ ಕಾಂಟ್ರವರ್ಷಿಗೆ ನಾನು ಹೋಗಿಲ್ಲ ತಾವು ಒಳ್ಳೆಯದನ್ನು ಹೇಳಿದ್ದಕ್ಕೆ ಸ್ವಾಗತ ಮಾಡಿದೆ. ನಾನು ಹೆಚ್ಚು ಮಾತನಾಡಿಲ್ಲ. ಚುನಾವಣೆ ನಡೆಯಲಿ ಎಂದರೆ ನಡೆಯಲಿ ನನಗೆ ಅದರಿಂದ ಲಾಭ ನಷ್ಟ ಇಲ್ಲ. ಆದರೆ ತೋಳು ಬಲ ಏನು ನಡೆದಿದೆ ಅದನ್ನು ಬೇಕಾದರೆ ತಾವು ನಡೆಸಿಕೊಳ್ಳಿ.... ಆದರೆ ಅದನ್ನು ನಾನು ಹೇಳಬಾರದೆಂದು ಹೇಳಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಅಲ್ಲಿ ನಡೆದಿರತಕ್ಕಂಥಾದ್ದು ತಮಗೆ ಗೊತ್ತಿಲ್ಲವೆಂದು ಇದ್ದರೂ ಕೂಡ ಹೊಡೆದು ಹಾಕಿರತಕ್ಕಂತಹ ಫೋಟೋ ಕಾಪಿಯನ್ನು ನಾನು ತೋರಿಸಿದ್ದೇನೆ. ಒಂದು ವೇಳೆ ಹೊಡೆದು ಹಾಕಿದ್ದು ನಿಜವಾಗಿದ್ದರೆ ಅದು ತಪ್ಪು ಎನ್ನುವ ಮಾತನ್ನು ನಾನು ಅವರಿಂದ ನಿರೀಕ್ಷೆ ಮಾಡಿದ್ದೆ. ಹೊಡೆದು ಹಾಕಿದ್ದು ಇದೆ. ಹೊಡೆದು ಹಾಕಿದ್ದರ ಫೋಟೋ ಕಾಪಿಯನ್ನು ನಾನು ಕಳುಹಿಸಿದ್ದೇನೆ. ವೆರಿಫೈ ಮಾಡಿಯೇ....

ಶ್ರೀ ಧರ್ಮಸಿಂಗ್: ಅದನ್ನು ವೆರಿಫೈ ಮಾಡಲಿಕ್ಕೆ ಕಳುಹಿಸಿಕೊಡಿ ವೆರಿಫೈ ಮಾಡಲಿ.

ಶ್ರೀ ಎಂ.ಪಿ.ಪ್ರಕಾಶ್: ಅದನ್ನು ತರಿಸಿಯೇ ನಾನು ಇಲ್ಲಿ ಹೇಳುತ್ತಿರುವುದು. ಅದನ್ನು ತರಿಸಿಯೇ ನಿಮಗೆ ತೋರಿಸುತ್ತಿರುವುದು. ತರಿಸದೇ ಯಾರಾದರೂ ಕೂಡ ಸದನದಲ್ಲಿ ಸುಳ್ಳು ಹೇಳುವುದಕ್ಕೆ ಬರುವುದಿಲ್ಲ ತಾವು ದಯಮಾಡಿ ನೋಡಿ.

ಶ್ರೀ ಕಾಗೋಡು ತಿಮ್ಮಪ್ಪ: ಕರಡು ಪ್ರತಿ ಅಧ್ಯಕ್ಷರು ಮತ್ತು ಮು.ಕ.ಅ.ಅವರಿಂದ ಅನುಮೋದಿಸಲಾಗಿದೆ ಎಂದಿದೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರೆ, ತಾವು ದಯವಿಟ್ಟು ಇದನ್ನು ನೋಡಿ. ಮಾನ್ಯ ಖರ್ಗೆ ಸಾಹೇಬರಿಗೆ ಕಳುಹಿಸಿ ಕೊಟ್ಟಿದ್ದೇನೆ, ದಯವಿಟ್ಟು ಹೊಡೆದು ಹಾಕಿರುವುದನ್ನು ತಾವು ನೋಡಿ. ಅದನ್ನೇ ನಾವು ದೊಡ್ಡ ಪ್ರತಿಷ್ಠೆಯನ್ನಾಗಿ ಮಾಡಿ ಮಾಡುತ್ತೇವೆ ಎಂದು ಅಲ್ಲ. ಇಲ್ಲಿ ಸದಸ್ಯರು ತಾವೇ ನಿನ್ನೆ ಮಾತನಾಡುವಾಗ..

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವರಿಗೆ ನಾವು ಸ್ವಾಗತ ಮಾಡಿದರೂ ಖುಷಿ ಇಲ್ಲ, ಟೀಕೆ ಮಾಡಿದರೂ ಸಹಿಸುವುದಿಲ್ಲ. ನಾವು ಏನು ಮಾಡಬೇಕು?

ಶ್ರೀ ಎಂ.ಪಿ.ಪ್ರಕಾಶ್: ಜಿಲ್ಲಾ ಪಂಚಾಯತಿಯಲ್ಲಿ ನಡವಳಿಕೆಗಳು ಸರಿಯಾಗಿಲ್ಲದೆ ಇರುವುದರಿಂದ ನಾವು ಆ ಸಭೆಗೆ ಹೋಗುವುದನ್ನೇ ಬಿಟ್ಟು ಬಿಟ್ಟಿದ್ದೇವೆ ಎಂದು ತಾವು ಹೇಳಿದ್ದೀರಿ. ಆದ್ದರಿಂದ ತಾವು ಸಭೆಗೆ ಹೋಗದೆ ಇದ್ದರೆ ಅವರಿಗೆ ಮಾರ್ಗದರ್ಶನ ಮಾಡುವವರು ಯಾರು? ತಾವು ಹಿರಿಯರು ಹೋಗಿ ಮಾರ್ಗದರ್ಶನ ಮಾಡಿ, ಅದು ತಮ್ಮ ಜಿಲ್ಲೆ. ನಮಗೆ ನಿಮ್ಮ ಅನುಭವದ ಹಿನ್ನೆಲೆಯಲ್ಲಿ ಏನಾದರೂ ಸ್ವಲ್ಪ ಸಾಧ್ಯತೆಯಾಗಿದ್ದರೆ ಜಿಲ್ಲೆಯ ನಡವಳಿಕೆಗಳು ಸರಿಯಾಗಿರಬಹುದಾಗಿತ್ತೇನೋ. ಅಲ್ಲಿ ಚುನಾಯಿತರಾಗಿರುವ 87 ಸದಸ್ಯರುಗಳಲ್ಲಿ 62ಜನ ಹಾಜರಾಗಿದ್ದಾರೆ. ಚುನಾಯಿತ ಸದಸ್ಯರಾಗಿರತಕ್ಕಂಥವರು 55 ಮಂದಿ ಇದ್ದರೆ ಅದರಲ್ಲಿ 51 ಮಂದಿ ಹಾಜರಾಗಿದ್ದಾರೆ, ಒಬ್ಬರು ಗತಿಸಿದ್ದಾರೆ. ಒಟ್ಟು ಚುನಾಯಿತ ಸದಸ್ಯರ ಸಂಖ್ಯೆ 55, ಅದರಲ್ಲಿ ಒಬ್ಬರು ಗತಿಸಿರುವುದರಿಂದ ಆ ಒಂದು ಸ್ಥಾನ ಖಾಲಿ ಇದೆ. 55 ಮಂದಿ ಸದಸ್ಯರಲ್ಲಿ 51 ಮಂದಿ ಚುನಾಯಿತ ಸದಸ್ಯರಿದ್ದಾರೆ. ಅಧ್ಯಕ್ಷರ ಚುನಾವಣೆಯಾಗಿದ್ದೇ ಒಂದು ದೊಡ್ಡ ಮಹಾಭಾರತ ಯುದ್ಧದಿಂದ ಅಧ್ಯಕ್ಷರು ಬಹಳ ಒಳ್ಳೆಯವರು ಎಂದು ಅವರು ಹೇಳಿದ್ದಾರೆ. ಅವರು ಒಳ್ಳೆಯವರಾಗಿರಬಹುದು, ಆದರೆ ನಿಷ್ಪ್ರಯೋಜಕರಾಗಿದ್ದರೆ? ಕಾನೂನು ಪ್ರಕಾರ ನಡವಳಿಕೆಗಳನ್ನು ಮಾಡಿಕೊಂಡು ಹೋಗುವಂಥ ತಿಳುವಳಿಕೆ ಅವರಿಗಿಲ್ಲದೆ ಹೋಗಿದ್ದರೆ ಏನು ಮಾಡುವುದು?

ಶ್ರೀ ಕಾಗೋಡು ತಿಮ್ಮಪ್ಪ: ಶಿವಮೊಗ್ಗದಲ್ಲಿ ಏನಾಗಿದೆ?

ಶ್ರೀ ಎಂ.ಪಿ.ಪ್ರಕಾಶ್: ಅವರನ್ನು ಆರಿಸಿದವರು ಯಾರು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈಗ ನಿಮ್ಮ ಕೂಸು ಲೋಕಶಕ್ತಿ ಕಡೆಗೆ

ಹೋಗುತ್ತಿರುತ್ತದೆ, ಅಲ್ಲಿಂದ ಈ ಕಡೆ ಬಂದಿದೆ. ನಾವು ಏನು ಮಾಡಬೇಕು?

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ಕೂಡ ಗಾಜಿನ ಮನೆಯಲ್ಲಿದ್ದೇವೆ. ಇದನ್ನು ಕನಿಷ್ಠ ಪಕ್ಷ ಇಷ್ಟಾದರೂ ತಾವು ಒಪ್ಪಿಕೊಳ್ಳಬೇಕಾಗುತ್ತದೆ. ನಾವೆಲ್ಲಾ ಗಾಜಿನ ಮನೆಯಲ್ಲಿದ್ದು ಈ ತತ್ವದ ವಿಚಾರದಲ್ಲಿ ಕಲ್ಲು ಒಗೆಯುವ ಕೆಲಸ ಮಾಡಿದರೆ ನಾವೇನೂ ಯಶಸ್ವಿಯಾಗುವುದಿಲ್ಲ. ಆದುದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದಿಷ್ಟೆ, ಈಗಲಾದರೂ ಕೂಡ ಹಿರಿಯರಾದಂಥವರು ಆ ಜಿಲ್ಲಾ ಪಂಚಾಯತಿಯಲ್ಲಿರುವವರು ಒಳ್ಳೆಯ ಮಾರ್ಗದರ್ಶನ ಮಾಡಲಿ, ಮುಂದಿನ ಚುನಾವಣೆಗಳೂ ಕೂಡ ಕಾನೂನುಬದ್ಧವಾಗಿ ನಡೆಯಲಿ, ದಕ್ಷರಾದಂಥ ಅಧಿಕಾರಿಗಳು ಅಲ್ಲಿಗೆ ಹೋದಂಥ ಸಂದರ್ಭದಲ್ಲಿ ಅವರಿಗೆ ಸ್ವಲ್ಪಮಟ್ಟಿಗೆ ನೈತಿಕ ಬೆಂಬಲ ಇಲ್ಲದಿದ್ದರೆ ನಿರ್ವಹಣೆ ಮಾಡುವುದು ಬಹಳ ಕಷ್ಟವಾಗುತ್ತದೆ. ಅದನ್ನು ನಾನು ಈ ಸದನದ ಮೂಲಕ ಮಾನ್ಯ ಹಿರಿಯರಲ್ಲಿ ವಿನಂತಿ ಮಾಡಿಕೊಳ್ಳುತ್ತಾ ಇಲ್ಲಿಗೆ ಇದನ್ನು ಮುಕ್ತಾಯಗೊಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಚೇರ್ಮನ್: ಈಗ ಸದನವನ್ನು ಮಧ್ಯಾಹ್ನ 3.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2.12 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 3.30 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಪುನಃ 3.35 ನಿಮಿಷಕ್ಕೆ ಪ್ರಾರಂಭವಾಯಿತು)

(ಸಭಾಧ್ಯಕ್ಷರು (ಶ್ರೀ ರಮೇಶ್‌ಕುಮಾರ್)ರವರು ಪೀಠವನ್ನಾಲಂಕರಿಸಿದರು)

(5) ಶಾಸನ ರಚನೆ ಕಾರ್ಯಕಲಾಪ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ 1997 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

''1997ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು